# ಶ್ರೀ ಶಾರದಾ

ಮಾಸಪತ್ರಿಕೆ - 15 ಮಾರ್ಚ್ 2012

II ಧಿಯೋ ಯೋನಃ ಪ್ರಚೋದಯಾತ್ II

ಬೆಲೆ ರೂ.2.50
WPP No. SK/MNG/WPP/69
D.O.P - 15th of every month from Udupi Sorting Office

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-12 ಸಂಚಿಕೆ-3 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.



ಶೃಂಗೇರಿ ತಾಲೂಕು ಐದನೇ ಚುಟುಕು ಸಾಹಿತ್ಯ ಸಮ್ಮೇಳನ



ಪುಟ-4

ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ
ಡಾ। ಎಚ್.ವಿ.ನರಸಿಂಹಮೂರ್ತಿ
ಪುಟ-5



ಮೆನೇಜ್‌ಮೆಂಟ್ ಗುರುವಾಗಿ 'ಆದಿ ಶಂಕರಾಚಾರ್ಯರು'
-ಸಿ.ಎಸ್.ರಾವ್
ಪುಟ-7



ಕಾರ್ಕಳ ರೋಟರಿ ಕ್ಲಬ್ ಉಪಾಧ್ಯಕ್ಷರಾಗಿ ಶ್ರೀಮತಿ ಜ್ಯೋತಿ ಪದ್ಮನಾಭ
ಪುಟ-8


# ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ

ಶಿವರಾತ್ರಿ ಪರ್ವ ಕಾಲದಲ್ಲಿ ಜಾಗರಣೆಯಲ್ಲಿದ್ದು, ಉಪವಾಸ ವ್ರತವನ್ನು ಆಚರಿಸಿ, ಅನನ್ಯ ಭಕ್ತಿಯಿಂದ ಶಿವನನ್ನು ಸ್ತುತಿಸಿದರೆ ಅವನು ಸಂತೃಪ್ತನಾಗಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತಾನೆಂಬುದು ನಮ್ಮೆಲ್ಲರ ದೃಢ ನಂಬಿಕೆ.

ಪ್ರತಿ ವರ್ಷದಂತೆ, ತಾ.20-02-2012, ಸೋಮವಾರದಂದು ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಬ್ರಹ್ಮಶ್ರೀ ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯ ಮತ್ತು ಶ್ರೀ ಜಗದೀಶ ಭಟ್ಟರ ನೇತೃತ್ವದಲ್ಲಿ ಬೆಳಗಿನಿಂದಲೇ ಏಕಾದಶ ರುದ್ರಾಭಿಷೇಕ, ಪಾರಾಯಣ ಮತ್ತು ವಿಶೇಷ ಪೂಜೆ ನಡೆಯಿತು.

ರುದ್ರಾಭಿಷೇಕ ಪೂಜೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಂಡಿದ್ದರು. ಮಹಿಳೆಯರು ಭಜನೆ ಹಾಗೂ ಲಲಿತಾ ಸಹಸ್ರನಾಮ ಪಠಣ ಮಾಡಿದರು. ಕಳೆದ ಸಲ ಶಿವರಾತ್ರಿ ದಿನ ಶ್ರೀಯುತ ಮ.ನಾ.ಹೆಬ್ಬಾರರಿಂದ ಹರಿಕಥಾ ಕಾಲಕ್ಷೇಪ ಕಾರ್ಯಕ್ರಮ ನಡೆದರೆ, ಈ ಬಾರಿ ಅಂಬಲಪಾಡಿಯ ಶ್ರೀ ಕೆ. ಜೆ. ಗಣೇಶ ತಂಡದವರಿಂದ ವಿಶಿಷ್ಟ 'ಯಕ್ಷ ಸಂಗೀತ' ಕಾರ್ಯಕ್ರಮ ನಡೆಯಿತು. ಶ್ರೀ ಕೆ.ಜೆ.ಗಣೇಶ ಅವರ ಜತೆ ಹಾಡುಗಾರಿಕೆಯಲ್ಲಿ ಶ್ರೀ ಚಂದ್ರಕಾಂತ ರಾವ್ ಮತ್ತು ಶ್ರೀ ಹೆರಂಜಾಲು ಗೋಪಾಲ ಗಾಣಿಗ ಇವರು ಭಾಗವಹಿಸಿದ್ದರು. ಶ್ರೀಯುತ ಕೆ.ಜೆ.ಕೃಷ್ಣ ಇವರು ಚೆಂಡೆಯಲ್ಲಿಯೂ ಮತ್ತು ಶ್ರೀ ಕೆ.ಜೆ.ಸುಧೀಂದ್ರ ಇವರು ಮೃದಂಗದಲ್ಲಿಯೂ ಸಹಕರಿಸಿದರು. ಯಕ್ಷ ಸಂಗೀತ ಕಾರ್ಯಕ್ರಮ ಬೆಳಿಗ್ಗೆ 10-30 ರಿಂದ 12-30ರ ವರೆಗೆ ನಡೆದು ನೆರೆದಿದ್ದ ಭಕ್ತರನ್ನು ಭಾವಪರವಶರನ್ನಾಗಿಸಿತು. ಅಂದವಾಗಿ ಮೂಡಿಬಂದ ಈ ಯಕ್ಷ ಸಂಗೀತ ಕಾರ್ಯಕ್ರಮದಲ್ಲಿ ಶ್ರೀಯುತ ಗಣೇಶ ಹೆಬ್ಬಾರರು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಪ್ರೋತ್ಸಾಹಿಸಿದರು. ಮಟ್ಟು ಕೃಷ್ಣಕುಮಾರ್ ಕಾರ್ಯಕ್ರಮವನ್ನು ಸಂಯೋಜಿಸಿದರು. ಈ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟ ಕಲಾವಿದರನ್ನು ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಮತ್ತು ಕಾರ್ಯದರ್ಶಿಗಳಾದ ಬಿ.ಕೃಷ್ಣಮೂರ್ತಿ ರಾವ್ ಇವರು ಸಂಘದ ಪದಾಧಿಕಾರಿಗಳು ಮತ್ತು ಸಮಾಜ ಬಾಂಧವರ ಸಮ್ಮುಖದಲ್ಲಿ ಸಂಭಾವನೆ ಮತ್ತು ಸ್ಮರಣಿಕೆಗಳನ್ನಿತ್ತು ಸನ್ಮಾನಿಸಿದರು. ಕೋಶಾಧಿಕಾರಿಗಳಾದ ಡಾ। ವೈ.ಸುದರ್ಶನ ರಾವ್ ವಂದಿಸಿದರು.

ಶಿವರಾತ್ರಿಯ ಪ್ರಯುಕ್ತ ಲಘು ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿದ್ದು ಇದರ ಸಂಪೂರ್ಣ ಜವಾಬ್ದಾರಿಯನ್ನು ಸಂಘದ ಜತೆ ಕಾರ್ಯದರ್ಶಿಗಳಾದ ಶ್ರೀಯುತ ಮಂಜುನಾಥ ಹೆಬ್ಬಾರ್ ವಹಿಸಿದ್ದರು. ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ ಸಮಾಜ ಬಾಂಧವರು ಶಿವನ ಕೃಪೆಗೆ ಪಾತ್ರರಾಗಿ ಧನ್ಯತಾ ಭಾವವನ್ನು ಹೊಂದಿದರು.

# ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012 ಲಾಂಛನ ಬಿಡುಗಡೆ



ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಲಾಂಛನವನ್ನು ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ತಾ.25-02-2012 ರಂದು ಶೃಂಗೇರಿಯಲ್ಲಿ ಬಿಡುಗಡೆ ಮಾಡಿದರು. ಸಮಾವೇಶವು ತಾ.12-05-2012ನೇ ಶನಿವಾರ ಹಾಗೂ 13-05-2012ನೇ ಆದಿತ್ಯವಾರದಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನಡೆಯಲಿದೆ.



## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿ - 2.

ನಮ್ಮ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ ತಾ.29-04-2012 ಆದಿತ್ಯವಾರ **ಸಾಮೂಹಿಕ ಉಪನಯನ** ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ. ಅದೇ ದಿನ ಸಂಜೆ 4-00 ಗಂಟೆಗೆ **ಶ್ರೀ ಶಂಕರ ತತ್ವ ಆಧಾರಿತ ಪ್ರವಚನ** ಜ್ಞಾನಭಾರತಿಯ ಸಹಯೋಗದೊಂದಿಗೆ ಜರಗಲಿದೆ.

ಸರ್ವರಿಗೂ ಆದರದ ಸ್ವಾಗತ :

- ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.20-04-2012ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ವಿನಂತಿಸಲಾಗಿದೆ.

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012

ಶ್ರೀಶಾರದಾ ನಗರ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು , ಉಡುಪಿ - 576 102.
Ph : 0820-2520754 Cell : + 91 98808 96166, +91 98456 44556 E-mail : absbsu@gmail.com

### ಸಮಾವೇಶ, ವಿಚಾರ ಗೋಷ್ಠಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

ಸಮಾಜ ಬಾಂಧವರೇ,

ಸ್ಥಾನಿಕ ಬ್ರಾಹ್ಮಣ ಸಮಾಜದ ವಿವಿಧ ಸಂಘಟನೆಗಳ ಪದಾಧಿಕಾರಿಗಳ ಪರಸ್ಪರ ಪರಿಚಯ, ಸಂಘಟನೆ, ವಿವಿಧ ಕಾರ್ಯಕ್ಷೇತ್ರಗಳಲ್ಲಿ ಉನ್ನತ ಸ್ಥಾನದಲ್ಲಿರುವವರನ್ನು ಗುರುತಿಸಿ ಗೌರವಿಸುವುದರ ಜೊತೆಗೆ ಅವರ ಮಾದರಿ ಇತರರಿಗೂ ತಿಳಿಯುವಂತೆ ಮಾಡುವುದು ಹಾಗೂ ಸ್ಥಾನಿಕ ಸಮಾಜದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ - ಇತ್ಯಾದಿ ಉದ್ದೇಶಗಳನ್ನು ಇರಿಸಿಕೊಂಡು ತಾರೀಕು 12-05-2012ನೇ ಶನಿವಾರ ಮತ್ತು ತಾರೀಕು 13-05-2012ನೇ ರವಿವಾರ ಸ್ಥಾನಿಕ ಬ್ರಾಹ್ಮಣರ ಸಮಾವೇಶ ಹಾಗೂ ವಿಚಾರಗೋಷ್ಠಿಗಳನ್ನು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಆಯೋಜಿಸಿರುತ್ತೇವೆ. ಈ ಸಮಾವೇಶದಲ್ಲಿ ಅಖಿಲ ಭಾರತ ಮಟ್ಟದಲ್ಲಿರುವ ಎಲ್ಲಾ ಸಮಾಜ ಬಾಂಧವರು ಪಾಲ್ಗೊಳ್ಳಬೇಕೆಂಬುದೇ ನಮ್ಮ ಸದಿಚ್ಛೆಯಾಗಿದೆ.

ತಾವು ಇದನ್ನು ತಮಗೆ ತಿಳಿದಿರುವ ಸಮಾಜ ಬಾಂಧವರಿಗೆಲ್ಲಾ ತಿಳಿಸಿ, ಈ ಸಮಾವೇಶದ ಪ್ರಚಾರ ಅಭಿಯಾನದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ. ಈ ನಿಟ್ಟಿನಲ್ಲಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳೊಂದಿಗೆ ಆರ್ಥಿಕ ಕ್ರೋಢೀಕರಣದಲ್ಲಿಯೂ ಸಹಕರಿಸಿ, ಸ್ಥಾನಿಕ ಬ್ರಾಹ್ಮಣ ಸಮಾವೇಶದ ಯಶಸ್ಸಿಗೆ ಕಾರಣಕರ್ತರಾಗಬೇಕಾಗಿ ಅಪೇಕ್ಷಿಸುತ್ತೇವೆ.

(ಕಾರ್ಯಕ್ರಮ ವಿವರಗಳು : 3ನೇ ಪುಟದಲ್ಲಿ)

ಪದಾಧಿಕಾರಿಗಳು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ 2012,
ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ- 576 102

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

*ದೈವಾಧೀನಂ ಜಗತ್ಸರ್ವಂ ಮಂತ್ರಾಧೀನಂತು ದೈವತಂ ।*
*ತನ್ಮಂತ್ರ ಬ್ರಾಹ್ಮಣಾಧೀನಂ ಬ್ರಾಹ್ಮಣೋ ಮಮದೇವತಾ ॥*

ಲೋಕವೆಲ್ಲವೂ ದೈವಾಧೀನವಾಗಿರುವುದು. ದೇವರು ಮಂತ್ರಾಧೀನವಾಗಿರುವನು. ಆ ಮಂತ್ರವು ಬ್ರಾಹ್ಮಣಾಧೀನವು ಆದುದರಿಂದ ಬ್ರಾಹ್ಮಣರೇ ಭೂದೇವತೆಗಳು.

★★★★

*ಪಕ್ಷಿಣಾಂ ಬಲಮಾಕಾಶಂ ಮತ್ಸ್ಯಾನಾಮುದಕಂ ಬಲಂ ॥*
*ದುರ್ಬಲಸ್ಯ ಬಲಂ ರಾಜಾ ಬಾಲಾನಾಂ ರೋದನಂ ಬಲಂ ॥*

ಪಕ್ಷಿಗಳಿಗೆ ಆಕಾಶವೇ ಬಲ. ಮೀನುಗಳಿಗೆ ನೀರೇ ಬಲ. ದುರ್ಬಲರಿಗೆ ರಾಜನೇ ಬಲ. ಎಳೆ ಮಕ್ಕಳಿಗೆ ಅಳುವೇ ಬಲ.

★★★★

*ಅಗ್ನಿಹೋತ್ರಂ ಗೃಹಕ್ಷೇತ್ರಂ ಗರ್ಭಿಣೀ ವೃದ್ಧ ಬಾಲಕಾನ್ ।*
*ರಿಕ್ತಹಸ್ತೇ ನನೋಯಾಯಾದ್ರಾಜಾನಂ ದೈವತಂ ಗುರುಂ ।*

ಅಗ್ನಿಹೋತ್ರವಿರುವ ಮನೆಯನ್ನೂ, ಪುಣ್ಯಕ್ಷೇತ್ರವನ್ನೂ, ಗರ್ಭಿಣಿ ಸ್ತ್ರೀಯನ್ನೂ, ವೃದ್ಧರನ್ನೂ, ಬಾಲಕರನ್ನೂ, ಅರಸನನ್ನು, ದೇವರನ್ನೂ ಮತ್ತು ಗುರುವನ್ನೂ ನೋಡಲು ಖಾಲಿ ಕೈಯಲ್ಲಿ ಹೋಗಕೂಡದು.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

### ೧೯

ಒಂದು ದಿನ ಯದುಕುಮಾರರಾದ ಪ್ರದ್ಯುಮ್ನ, ಸಾಂಬ, ಚಾರುಭಾನು, ಗದ ಮೊದಲಾದವರು ವಿಹಾರಾರ್ಥ ದ್ವಾರಕೆಯ ಉಪವನಕ್ಕೆ ಹೋದರು. ತುಂಬ ಹೊತ್ತು ಆಟವಾಡಿ ಬಾಯಾರಿದ ಅವರು ಒಂದು ಬಾವಿಯ ಹತ್ತಿರ ಹೋದರು. ಅದರಲ್ಲಿ ನೀರಿರಲಿಲ್ಲ, ಆದರೆ ಅಲ್ಲೊಂದು ಪರ್ವತದಂತೆ ಬೃಹದ್ಗಾತ್ರದ ಊಸರವಳ್ಳಿ ಇತ್ತು. ಅವರಿಗೆ ಅದನ್ನು ನೋಡಿ ಕರುಣೆ ಬಂತು. ಅದನ್ನು ಮೇಲೆತ್ತಲು ಅವರು ಹಗ್ಗ, ಬಳ್ಳಿಗಳನ್ನು ಬಳಸಿ ಯತ್ನಿಸಿದರು. ಆದರೆ ಅದನ್ನು ಮೇಲೆತ್ತಲಾಗಲಿಲ್ಲ, ಅವರು ಆಶ್ಚರ್ಯಪಡುತ್ತ ಬಂದು ಕೃಷ್ಣನಿಗೆ ಈ ವಿಷಯವನ್ನು ತಿಳಿಸಿದರು. ವಿಶ್ವೇಶ್ವರನಾದ ಭಗವಂತನು ಅಲ್ಲಿಗೆ ಬಂದು ಅದನ್ನು ಎಡಗೈಯಿಂದ ಲೀಲಾಜಾಲವಾಗಿ ಮೇಲೆತ್ತಿದನು. ಭಗವಂತನ ಕೈಸೋಕುವುದೇ ತಡ ಆ ಓತಿಯು ತನ್ನ ರೂಪವನ್ನು ಬಿಟ್ಟು ಒಬ್ಬ ದಿವ್ಯ ಪುರುಷನಾಯಿತು. ದಿವ್ಯವಾದ ವಸ್ತ್ರಾಭರಣಗಳಿಂದ ಶೋಭಿಸುತ್ತಿದ್ದ ಆ ಪುರುಷನನ್ನು ನೋಡಿ ಮುಕುಂದನು ಅವನ ವೃತ್ತಾಂತವನ್ನು ವಿಚಾರಿಸಿದರು. ''ಮಹಾನುಭಾವ, ನೀನು ಯಾರು? ನೀನು ಯಾರೋ ಉತ್ತಮ ದೇವತೆಯೇ ಆಗಿರಬೇಕೆಂದು ತರ್ಕಿಸುತ್ತೇನೆ. ನಿನಗೆ ಇಂತಹ ನಿಂದ್ಯಸ್ಥಿತಿ ಯಾಕೆ ಪ್ರಾಪ್ತವಾಯಿತು? ನೀನು ಮಾಡಿದ ಅಪರಾಧ ವೇನು? ಹೇಳಬಹುದಾದರೆ ಹೇಳು.'' ಆಗ ಕೃಷ್ಣನಿಗೆ ನಮಿಸಿದ ಆ ಪುರುಷನು ಎಂದನು, ''ಪುರುಷೋತ್ತಮ, ನಾನು ಇಕ್ಷ್ವಾಕು ಮಹಾರಾಜನ ಮಗನಾದ ನೃಗ. ನಾನು ದಾನಿಗಳಲ್ಲಿ ಶ್ರೇಷ್ಠನೆಂಬ ವಿಚಾರ ನಿನ್ನ ಕಿವಿಗೂ ಬಿದ್ದಿರಬಹುದು. ನಾನು ದಾನ ಮಾಡಿದ ಗೋವುಗಳೆಷ್ಟೆಂಬುದನ್ನು ಹೇಳಲಾಗುವುದಿಲ್ಲ, ಯಾಕೆಂದರೆ ಅದು ಅಗಣಿತ. ಗೋವುಗಳನ್ನು ಮಾತ್ರವಲ್ಲ, ಇತರ ಸಂಪತ್ತನ್ನೂ ದಾನ ಮಾಡಿರುವೆನು. ಯಜ್ಞಯಾಗಗಳನ್ನೂ ನಡೆಸಿರುವೆನು. ಒಮ್ಮೆ ನಾನು ಬ್ರಾಹ್ಮಣನಿಗೆ ದಾನ ಮಾಡಿದ ಗೋವುಗಳಲ್ಲಿ ಒಂದು ಹೇಗೋ ತಪ್ಪಿಸಿಕೊಂಡು ಬಂದು ದಾನ ಮಾಡದ ಗೋವುಗಳ ಹಿಂಡಿನಲ್ಲಿ ಸೇರಿಕೊಂಡಿತು. ಅದನ್ನು ತಿಳಿಯದ ನಾನು ಅದೇ ಹಸುವನ್ನು ಇನ್ನೊಬ್ಬ ಬ್ರಾಹ್ಮಣನಿಗೆ ದಾನ ಮಾಡಿದೆನು. ಅದನ್ನು ಅಟ್ಟಿಕೊಂಡು ಹೋಗುವಾಗ ಮೊದಲಿನ ಬ್ರಾಹ್ಮಣನು ಅದನ್ನು ಗುರುತಿಸಿ ಅದು ತನ್ನ ದನವೆಂದನು. ಆದರೆ ಆ ಬ್ರಾಹ್ಮಣನು ತನಗೆ ಈಗ ತಾನೆ ರಾಜನು ದಾನ ಮಾಡಿದ್ದಾಗಿ ಹೇಳಿದನು. ಅವರಿಬ್ಬರೂ ಜಗಳವಾಡುತ್ತ ನನ್ನ ಬಳಿಗೆ ಬಂದರು. ನಾನು ದಾನ ಮಾಡಿದ್ದನ್ನು ಅಪಹರಿಸುವವನೆಂದು ನನ್ನನ್ನು ನಿಂದಿಸಿದರು. ಆಗ ನನಗೆ ಗೊಂದಲವುಂಟಾಯಿತು. ಅವರನ್ನು ಸಮಾಧಾನ ಪಡಿಸುವ ಸಲುವಾಗಿ ಒಂದು ಗೋವಿನ ಬದಲಿಗೆ ಒಂದು ಲಕ್ಷ ಗೋವುಗಳನ್ನು ಕೊಡುವುದಾಗಿ ಹೇಳಿದೆನು. ಅದು ತನಗೆ ಬೇಡವೆಂದು ಒಬ್ಬನು ಅಲ್ಲಿಂದ ಹೊರಟು ಹೋದನು. ಇನ್ನೊಬ್ಬನು ಲಕ್ಷದ ಮೇಲೆ ಹತ್ತು ಸಾವಿರ ಕೊಟ್ಟರೂ ಬೇಡವೆಂದನು. ಇಷ್ಟರಲ್ಲಿ ಯಮದೂತರು ಬಂದು ನನ್ನನ್ನು ಯಮಸದನಕ್ಕೆ ಕರೆದುಕೊಂಡು ಹೋದರು. ಅಲ್ಲಿ ಯಮನು ಕೇಳಿದನು, ''ರಾಜನೇ, ನೀನು ಮೊದಲು ಏನನ್ನು ಅನುಭವಿಸಲು ಇಷ್ಟಪಡುತ್ತೀ? ಪಾಪದ ಫಲವನ್ನೋ? ಪುಣ್ಯದ ಫಲವನ್ನೋ?''. ಆಗ ನಾನು ಪಾಪದ ಫಲವನ್ನೇ ಮೊದಲು ಅನುಭವಿಸುವುದಾಗಿ ಹೇಳಿದೆನು. ಅದಕ್ಕೆ ಯಮನು ನನಗೆ ನೀಚಯೋನಿಯನ್ನು ತಾಳುವಂತೆ ಹೇಳಿದನು. ಆಗ ನಾನು ಓತಿಕೇತನಾಗಿ ಈ ಬಾವಿಯಲ್ಲಿ ಬಿದ್ದೆನು. ನಾನು ಪುಣ್ಯಶಾಲಿಯೂ, ನಿನ್ನ ಭಕ್ತನೂ ಆಗಿದ್ದರಿಂದ ನನಗೆ ಪೂರ್ವಜನ್ಮದ ಸ್ಮರಣೆಯಿತ್ತು. ಈಗ ನಿನ್ನ ದರ್ಶನದಿಂದ ಅಶುಭ ನಿವೃತ್ತಿಯಾಯಿತು. ಇನ್ನು ನಿನ್ನ ಅನುಮತಿಯನ್ನು ಪಡೆದು ಪುಣ್ಯಲೋಕಕ್ಕೆ ಹೋಗುವೆನು''. ಅನಂತರ ಶ್ರೀಕೃಷ್ಣನಿಗೆ ಪ್ರದಕ್ಷಿಣ ನಮಸ್ಕಾರ ಮಾಡಿ ಎಲ್ಲರೂ ನೋಡುತ್ತಿದ್ದಂತೆ ನೃಗನು ವಿಮಾನವನ್ನೇರಿ ಸ್ವರ್ಗಕ್ಕೆ ಹೋದನು. ಆಗ ಶ್ರೀಕೃಷ್ಣನು ಬ್ರಾಹ್ಮಣರ ಮತ್ತು ಬ್ರಹ್ಮಸ್ವತ ಮಹಾತ್ಮ್ಯವನ್ನು ಎಲ್ಲರಿಗೂ ವರ್ಣಿಸಿ ಹೇಳಿದನು.

### ೨೦

ಒಮ್ಮೆ ಬಲರಾಮನಿಗೆ ನಂದಗೋಕುಲಕ್ಕೆ ಹೋಗಿ ತನ್ನ ಬಂಧುಗಳನ್ನೂ, ಗೆಳೆಯ ಗೆಳತಿಯರನ್ನೂ ಕಂಡು ಬರುವ ಆಸೆಯಾಯಿತು. ಹಾಗೆ ಅವನು ವ್ರಜಭೂಮಿಗೆ ತೆರಳಿದನು. ಅಲ್ಲಿ ನಂದಗೋಪ, ಯಶೋದೆ ಮೊದಲಾದ ಹಿರಿಯರನ್ನು ಕಂಡು ಅವರ ಅವಿಚ್ಛಿನ್ನ ವಾತ್ಸಲ್ಯದ ಸವಿಯನ್ನು ಅನುಭವಿಸಿದನು. ಹಾಗೇ ಹಿರಿಯ ಗೋಪಾಲರನ್ನೂ, ಸಮವಯಸ್ಕರನ್ನೂ, ಗೋಪಿಯರನ್ನೂ ಭೇಟಿಯಾಗಿ ತನ್ನ ಪ್ರೀತಿಯನ್ನೂ, ಶ್ಯಾಮಸುಂದರನ ಸಂದೇಶವನ್ನೂ ಪ್ರಕಟಿಸಿದನು. ಅಲ್ಲೇ ಕೆಲವು ಕಾಲವಿದ್ದು ರಾತ್ರಿಗಳಲ್ಲಿ ಗೋಪಿಯರೊಡನೆ ವಿಹರಿಸಿದನು. ವರುಣನು ಕಳುಹಿಸಿಕೊಟ್ಟ ವಾರುಣಿ ಎಂಬ ಮದ್ಯವನ್ನು ಪಾನ ಮಾಡಿದನು. ಅದರ ಅಮಲು ತಲೆಗೇರಲು ಅವನು ಯಮುನೆಯನ್ನು ವಿಹಾರಕ್ಕೆ ಕರೆದನು. ಆದರೆ ಬಲರಾಮನು ಮಧುಮತ್ತನಾದುದರಿಂದ ಯಮುನೆಯು ಬರಲಿಲ್ಲ, ಇದರಿಂದ ಕ್ರುದ್ಧನಾದ ಬಲಭದ್ರನು ತನ್ನ ಹಲಾಯುಧದಿಂದ ಯಮುನೆಯನ್ನು ಸೆಳೆದನು. ಆಗ ಅವಳು ಶರಣು ಬಂದಳು.

ಇತ್ತ ಬಲರಾಮನ ಅನುಪಸ್ಥಿತಿಯಲ್ಲಿ ಕರೂಷ ದೇಶದ ಅರಸನಾದ ಪೌಂಡ್ರಕನು ಶ್ರೀಕೃಷ್ಣನ ಆಸ್ಥಾನಕ್ಕೆ ಒಬ್ಬ ದೂತನನ್ನು ಕಳುಹಿಸಿ ತನ್ನ ಸಂದೇಶವನ್ನು ತಿಳಿಸಿದನು, ''ಕೃಷ್ಣ ನೀನು ವಾಸುದೇವ ಎಂದುಕೊಂಡು ಜನರನ್ನು ವಂಚಿಸುತ್ತ ಓಡಾಡುತ್ತಿದ್ದೀ. ನಿಲ್ಲಿಸು ನಿನ್ನ ಈ ಬೂಟಾಟಿಕೆಗಳನ್ನು. ನಿಜವಾದ ಅವತಾರ ಪುರುಷನಾದ ವಾಸುದೇವ ನಾನೇ. ಶಂಖ, ಚಕ್ರ, ಗದಾ, ಪದ್ಮಗಳ ಚಿಹ್ನೆಗಳನ್ನು ತೋರಿಸುತ್ತಾ ಜನರನ್ನು ಮೋಸ ಮಾಡುವುದನ್ನು ಇನ್ನಾದರೂ ನಿಲ್ಲಿಸು. ಜಗತ್ತಿನ ಉದ್ಧಾರಕ್ಕಾಗಿ ಅವತಾರ ತಾಳಿರುವ ನನಗೆ ಬೇಗನೆ ಶರಣಾಗು. ನಿನ್ನನ್ನು ನಾನು ರಕ್ಷಿಸುತ್ತೇನೆ. ಇಲ್ಲವಾದರೆ ಯುದ್ಧಕ್ಕೆ ಬಾ''.

ಪೌಂಡ್ರಕನ ಈ ಅಧಿಕ ಪ್ರಸಂಗಕ್ಕೆ ಕಾರಣವನ್ನು ತಿಳಿದುಕೊಳ್ಳುವುದು ಸೂಕ್ತ. ಇವನು ಪುಂಡ್ರಕ ವಂಶದ ವಸುದೇವನೆಂಬವನ ಮಗನು. ಇವನ ರಾಜ್ಯದ ಪ್ರಜೆಗಳು ಇವನನ್ನೇ ಅವತಾರ ಪುರುಷನಾದ ವಾಸುದೇವನೆಂದು ಕೊಂಡಾಡುತ್ತಿದ್ದರು. ಮೊದಮೊದಲು ಅವನು ಮುಜುಗರ ಪಡುತ್ತಿದ್ದರೂ ಕ್ರಮೇಣ ಅದು ಅಭ್ಯಾಸವಾಗಿ ಕೊನೆಗೆ ಅದು ನಂಬಿಕೆಯಾಗಿ ಪರಿಣಮಿಸಿತು. ಹೀಗೆ ಭ್ರಮಿಷ್ಠನಾದ ಅವನು ಶಂಖ, ಚಕ್ರ, ಗದಾ, ಪದ್ಮಗಳನ್ನು ಹಿಡಿದು ಜನರ ಮುಂದೆ ನಿಲ್ಲತೊಡಗಿದನು. ಈಗಂತು ಅವನು ಸಾಕ್ಷಾತ್ ನಾರಾಯಣನೆಂದು ಜನರು ಹೊಗಳಿ ಅಟ್ಟಕೇರಿಸಿದರು. ಆದರೆ ಶ್ರೀಕೃಷ್ಣನು ತನಗೆ ಪ್ರತಿಸ್ಪರ್ಧಿಯಾಗಿದ್ದಾನಲ್ಲ ಎಂದು ಚಿಂತೆಯಿಂದ ಅವನು ದ್ವಾರಕೆಗೆ ದೂತನ ಮೂಲಕ ಸಂದೇಶವನ್ನು ಕಳುಹಿಸಿದ್ದ.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**
**''ಚಿಂತನ ಚುಕ್ಕಿಗಳು''**

*ಲೇಖಕರು :*
ಶ್ರೀಮತಿ ಸಾವಿತ್ರಿ ಮನೋಹರ್ (ಕಳಸ), ಕಾರ್ಕಳ
*ಪ್ರಕಾಶಕರು :*
ಸಂದೀಪ ಸಾಹಿತ್ಯ ಆತ್ರಾಡಿ, ಉಡುಪಿ ಜಿಲ್ಲೆ
*ಮುದ್ರಣ :* ಶುಭೋದಯ ಪ್ರಕಾಶನ, ಬೆಂಗಳೂರು
*ಬೆಲೆ :* ರೂ.35/-

ಚಿಂತನ ಚುಕ್ಕಿಗಳು ಈ ಕೃತಿಯ ಲೇಖಕರ 'ಮನದ ಮಾತು'-ಹತ್ತು ತಿಂಗಳಿಗೆ ಹತ್ತು ಹೆಜ್ಜೆ ಇಟ್ಟ ಮಗುವಿನಂತೆ ಈ ನನ್ನ ಹತ್ತನೇ ಪುಸ್ತಕ ನಿಮ್ಮ ಹಸ್ತದಲ್ಲಿಡುತ್ತಿದ್ದೇನೆ. ಹೆತ್ತೊಡಲ ಹಾರೈಕೆಯೊಂದಿಗೆ ಆರಂಭಗೊಂಡ ಬರಹ, ಹತ್ತು ಸಮಸ್ತರ ಹತ್ತಾರು ಸಲಹೆ ಸೂಚನೆಗಳೊಂದಿಗೆ ಸಾಗುತ್ತಿದೆ. ಇದೀಗ ನಿಮ್ಮ ಕೈಯಲ್ಲಿಡುತ್ತಿರುವ 'ಚಿಂತನ ಚುಕ್ಕಿಗಳು' ಮಂಗಳೂರು ಆಕಾಶವಾಣಿಯಲ್ಲಿ ಪ್ರಸಾರಗೊಂಡ ಚಿಂತನಗಳು. ಗೆಳತಿಯರ, ಹಿತೈಷಿಗಳ ಆಶಯದಂತೆ ಅವುಗಳನ್ನು ಪುಸ್ತಕ ರೂಪಕ್ಕೆ ಇಳಿಸುವ ಸಾಹಸ ಮಾಡಿರುವೆ.

ಕೆ.ಭೋಜರಾವ್, ಸುಲಗ್ನ ಸಂಪಾದಕರ 'ಮುನ್ನುಡಿ'-ಇಂದು ನಶಿಸಿ ಹೋಗುತ್ತಿರುವ ಮಾನವೀಯ ಮೌಲ್ಯಗಳ ಮೌಲ್ಯ ಮಾಪನ ಚೆನ್ನಾಗಿ ಮಾಡಿದ್ದಾರೆ. 'ಕುಂಕುಮ' ಇಂದು ಹೆಂಗಳೆಯರ ಹಣೆಯಿಂದ ಮಾಯವಾಗುತ್ತಿರುವುದು ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ. ಅದನ್ನು ತಮ್ಮ ಚಿಂತನೆಯ ಮೂಲಕ ಭಾರತೀಯ ಮಹಿಳೆಯರನ್ನು ಚಿಂತನೆಗೆ ಹಚ್ಚಿದ್ದಾರೆ.

ಇಂದಿರಾ ಹಾಲಂಬಿಯವರ 'ಶುಭ ಹಾರೈಕೆ'-ಸಾವಿತ್ರಿ ಮನೋಹರ್ ಅವರ ಲೇಖನಿಯಿಂದ ವೈವಿಧ್ಯಪೂರ್ಣವಾಗಿ ಮೂಡಿಬರುವ ಕತೆ, ಕವನ, ನಾಟಕ, ಹಾಸ್ಯ ಬರಹ, ಚಿಂತನ ಬರಹಗಳು ಸಮೃದ್ಧವಾಗಿ, ಸಶಕ್ತವಾಗಿ ಆಸಕ್ತ ಓದುಗರನ್ನು ತಲುಪುವಂತಾಗಲಿ. 'ಸಂದೀಪ ಸಾಹಿತ್ಯ ಪ್ರಕಾಶನ'ವನ್ನು ಇನ್ನಷ್ಟು ಬೆಳೆಸುವಲ್ಲಿ, ಬೆಳಗಿಸುವಲ್ಲಿ ಇಂತಹ ಅದೆಷ್ಟೋ 'ಚಿಂತನ ಚುಕ್ಕಿಗಳು' ಕೈ ಜೋಡಿಸಿ ಸಹಕರಿಸಲಿ ಎಂದು ಹಾರೈಸುತ್ತೇನೆ.

ಈ ಕೃತಿಯಲ್ಲಿ ಜನನಿ ತಾನೆ ಮೊದಲ ಗುರುವು, ಯುವಶಕ್ತಿ ನಂಬಿಕೆಟ್ಟವರಿಲ್ಲ, ನಿಜವಾದ ಭಕ್ತಿ ಅಮ್ಮಾ ಎಂದರೆ ಅದಮ್ಯ ಚೈತನ್ಯ...... ಹೀಗೆ ಇಪ್ಪತ್ತು ಚಿಂತನಗಳಿವೆ.

ಅಮ್ಮಾ ಎಂದರೆ ಅದಮ್ಯ ಚೈತನ್ಯ ಎಂಬ ಚಿಂತನದಲ್ಲಿ ಮೂಡಿಬಂದ ಕೆಲವು ಸಾಲುಗಳು : ನಿಜ ಹೇಳಬೇಕೆಂದರೆ ನನಗೆ ಬರೆಯುವ ಹುಚ್ಚು ಹಿಡಿಸಿದ್ದೂ ನನ್ನಮ್ಮನೇ. ಪ್ರಾಥಮಿಕ ಶಾಲೆಯಲ್ಲಿದ್ದಾಗ ಪ್ರಜಾವಾಣಿಯಲ್ಲಿ ಬರುತ್ತಿದ್ದ 'ಜಾಣ ಪುಟಾಣಿ' ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆಯಲು ಅಮ್ಮನೇ ಕಾರಣ. ಪ್ರೌಢಶಾಲೆಯಲ್ಲಿದ್ದಾಗ ನಾನು ಕಥೆ ಬರೆಯುವಾಗ ಸ್ಪರ್ಧೆಗಳಲ್ಲಿ ಭಾಗವಹಿಸುವಾಗ ಅಮ್ಮ ''ನೀನೂ ತ್ರಿವೇಣಿಯ ಹಾಗೇ ಕಥೆಗಾರ್ತಿಯಾಗ್ತಿ'' ಎಂದು ಹಾರೈಸುತ್ತಿದ್ದಳು. ಅದೇ ಪ್ರೋತ್ಸಾಹ ನನ್ನಲ್ಲಿ ಸಾಹಿತ್ಯ ಪ್ರೇಮ ಬೆಳೆಸಿದ್ದು. ಅದಕ್ಕೆ ಅಲ್ಲವೇ ''ಜನನಿ ತಾನೇ ಮೊದಲ ಗುರು'' ಎಂದು ಹಾಡಿಹೊಗಳಿದ್ದು. ಅಮ್ಮ ಎಂಬ ಪದವೇ ಅಷ್ಟೊಂದು ಆಪ್ಯಾಯಮಾನ ಅಮ್ಮ ಅದ್ಭುತ ಶಕ್ತಿಯ ಅವತಾರ.

ನಮ್ಮ ಸಮಾಜದ ಒಬ್ಬ ಪ್ರಖ್ಯಾತ ಮಹಿಳಾ ಲೇಖಿಕಿ ಶ್ರೀಮತಿ ಸಾವಿತ್ರಿ ಮನೋಹರ ರಾವ್ ಇವರಿಗೆ ಅಭಿನಂದನೆಗಳು.

**– ವೈ. ಮೋಹನ ರಾವ್.**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಪಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ.

1ನೇ ಪುಟದಿಂದ

## ಕಾರ್ಯಕ್ರಮಗಳ ಪಟ್ಟಿ

**ದಿನಾಂಕ 12-05-2012ನೇ ಶನಿವಾರ**

ಬೆಳಿಗ್ಗೆ 9 ರಿಂದ 12 : ಉದ್ಘಾಟನೆ

ಮಧ್ಯಾಹ್ನ 12 ರಿಂದ 1 : ಸಾಂಸ್ಕೃತಿಕ ಕಾರ್ಯಕ್ರಮ

ಮಧ್ಯಾಹ್ನ 1 ರಿಂದ 2 : ಭೋಜನ

ಅಪರಾಹ್ನ 2 ರಿಂದ 5 : ವಿಚಾರಗೋಷ್ಠಿ - I

1. ಸ್ಥಾನಿಕ ಬ್ರಾಹ್ಮಣ ಸಮಾಜದಲ್ಲಿ ವೈದಿಕತನದ ಉಳಿವಿಗಾಗಿ ಕೈಗೊಳ್ಳಬೇಕಾದ ಕ್ರಮಗಳು
2. ಸ್ಥಾನಿಕ ಬ್ರಾಹ್ಮಣರ ಆಡಳಿತದಲ್ಲಿರುವ ದೇವಸ್ಥಾನಗಳ ಪರಿಚಯ ಹಾಗೂ ಸಮಸ್ಯೆಗಳು

ಸಂಜೆ 5 ರಿಂದ 9 : ಸಾಂಸ್ಕೃತಿಕ ಕಾರ್ಯಕ್ರಮ

**ದಿನಾಂಕ 13-05-2012ನೇ ಆದಿತ್ಯವಾರ**

ಬೆಳಿಗ್ಗೆ 9 ರಿಂದ 12 : ವಿಚಾರಗೋಷ್ಠಿ - I

1. ಸ್ಥಾನಿಕ ಬ್ರಾಹ್ಮಣ ಸಮಾಜದಲ್ಲಿ ವೈವಾಹಿಕ ಸಂಬಂಧಿ ಸಮಸ್ಯೆಗಳು ಮತ್ತು ಪರಿಹಾರ
2. ಸ್ಥಾನಿಕ ಬ್ರಾಹ್ಮಣ ಸಮಾಜದ ಅಭಿವೃದ್ಧಿಗೆ ಸಂಘಗಳು ಕೈಗೊಳ್ಳಬೇಕಾದ ಕ್ರಮಗಳು

ಮಧ್ಯಾಹ್ನ 12 ರಿಂದ 1 : ಸಾಂಸ್ಕೃತಿಕ ಕಾರ್ಯಕ್ರಮ

ಮಧ್ಯಾಹ್ನ 1 ರಿಂದ 2 : ಭೋಜನ

ಅಪರಾಹ್ನ 2 ರಿಂದ 4 : ಸಾಂಸ್ಕೃತಿಕ ಕಾರ್ಯಕ್ರಮ

ಸಂಜೆ 4 ರಿಂದ 6 : ಸನ್ಮಾನ ಹಾಗೂ ಸಮಾರೋಪ ಸಮಾರಂಭ

ಸಂಜೆ 6 ರಿಂದ 9 : ಸಾಂಸ್ಕೃತಿಕ ಕಾರ್ಯಕ್ರಮ

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ - 2012

**ಗೌರವಾಧ್ಯಕ್ಷರು** : ಶ್ರೀ ಎಂ. ಆರ್. ವಾಸುದೇವ ರಾವ್

**ಅಧ್ಯಕ್ಷರು** : ಶ್ರೀ ಉಮೇಶ ಶ್ಯಾನುಭೋಗ್, ಕಿರಿಮಂಜೇಶ್ವರ

**ಗೌರವ ಸಂಚಾಲಕರು** : ಶ್ರೀ ಸಿ. ಎಸ್. ರಾವ್, ಚಿಟ್ಪಾಡಿ

**ವ್ಯವಸ್ಥಾಪಕ ಸಂಚಾಲಕರು** : ಶ್ರೀ ಕರುಣಾಕರ ರಾವ್ ಬೆಳ್ಳೆ

**ಸಂಚಾಲಕರು** : ಶ್ರೀ ಎನ್. ಕೆ. ಜಗನ್ನಿವಾಸ ರಾವ್, ಪುತ್ತೂರು

**ವಿಚಾರ ಗೋಷ್ಠಿಯ ಸಂಚಾಲಕರು** : ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ

**ವಿಚಾರ ಗೋಷ್ಠಿಯ ಸಹಸಂಚಾಲಕರು** : ಶ್ರೀ ಸಂಪತ್ ಕುಮಾರ್, ಕುಂಭಾಶಿ

**ಉಪಾಧ್ಯಕ್ಷರುಗಳು** : ಸ್ಥಾನಿಕ ಬ್ರಾಹ್ಮಣ ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಹಾಲಿ ಅಧ್ಯಕ್ಷರುಗಳು ಯಾ ಕಾರ್ಯದರ್ಶಿಗಳು

**ಪ್ರಧಾನಕಾರ್ಯದರ್ಶಿ** : ಶ್ರೀ ಪ್ರಫುಲ್ಲಚಂದ್ರ ರಾವ್, ಉಡುಪಿ

**ಕಾರ್ಯದರ್ಶಿ** : ಶ್ರೀ ಎಂ. ದೇವಾನಂದ ಭಟ್, ಬೆಳುವಾಯಿ

**ಲೆಕ್ಕಪತ್ರ ಪರಿಶೋಧಕರು** : ಶ್ರೀ ಗಣೇಶ ಹೆಬ್ಬಾರ್, ಉಡುಪಿ

**ಜೊತೆ ಕಾರ್ಯದರ್ಶಿಗಳು** : ಶ್ರೀ ಎಂ. ಕೆ. ದಿವಾಕರ ರಾವ್, ಪಡುಬಿದ್ರಿ
ಶ್ರೀ ಗಣೇಶ ರಾವ್, ಕುಂಭಾಶಿ
ಶ್ರೀಮತಿ ಉಷಾ ಎಲ್. ಶ್ಯಾನುಭೋಗ್
ಶ್ರೀ ಬಿ.ಎಸ್. ಅನಿಲ್ ರಾವ್, ಮಂಗಳೂರು
ಶ್ರೀ ಧನಂಜಯ ರಾವ್, ಬೆಳ್ತಂಗಡಿ
ಶ್ರೀ ಸುಧಾಕರ ರಾವ್, ಬೆಳ್ಳೆ
ಶ್ರೀಮತಿ ಶರಾವತಿ ರವಿರಾಜ್, ಎಲ್ಲೂರು
ಶ್ರೀ ಅರವಿಂದ ಕುಮಾರ್, ಮಣಿಪಾಲ
ಶ್ರೀ ಕೃಷ್ಣಕುಮಾರ್ ರಾವ್, ಮಟ್ಟು
ಶ್ರೀ ವಸಂತ ರಾವ್, ಕರಂಬಳ್ಳಿ
ಶ್ರೀಮತಿ ಸಾವಿತ್ರಿ ಮನೋಹರ್, ಕಾರ್ಕಳ
ಶ್ರೀ ರಾಘವೇಂದ್ರ ಹೆಬ್ಬಾರ್, ಮೂಡುಬಿದಿರೆ

**ಕೋಶಾಧಿಕಾರಿ** : ಶ್ರೀ ಸದಾನಂದ ರಾವ್, ಮಾರ್ಪಳ್ಳಿ

**ಜೊತೆ ಕೋಶಾಧಿಕಾರಿ** : ಶ್ರೀ ವೇಣುಗೋಪಾಲ ರಾವ್, ಉಡುಪಿ

**ಪ್ರಚಾರ ಸಮಿತಿ ಸಂಚಾಲಕರು** : ಶ್ರೀ ಟಿ. ವಿಶ್ವನಾಥ ಶ್ಯಾನುಭೋಗ್, ವಿ. ಪಿ. ನಗರ ಮತ್ತು ಬಳಗ

**ಆರ್ಥಿಕ ಸಮಿತಿ ಸಂಚಾಲಕರು** : ಶ್ರೀ ಜಯರಾಮ ರಾವ್, ಉಡುಪಿ ಮತ್ತು ಬಳಗ

**ಅಲಂಕಾರ ಮತ್ತು ಸ್ವಚ್ಛತಾ ಸಮಿತಿ ಸಂಚಾಲಕರು** : ಶ್ರೀ ವೈ. ಅಜಿತ್ ರಾವ್, ಉಡುಪಿ ಮತ್ತು ಬಳಗ

**ಊಟೋಪಚಾರ ಸಮಿತಿ ಸಂಚಾಲಕರು** : ಶ್ರೀ ಕೆ. ಮಂಜುನಾಥ ಹೆಬ್ಬಾರ್, ಉಡುಪಿ ಮತ್ತು ಬಳಗ

**ಸಾಂಸ್ಕೃತಿಕ ಸಮಿತಿ ಸಂಚಾಲಕರು** : ಶ್ರೀ ಕೆ. ಸೀತಾರಾಮ ಹೆಬ್ಬಾರ್, ಕಬ್ಬಿನಾಲೆ ಮತ್ತು ಬಳಗ

**ವಧೂ-ವರರ ಸಮಾವೇಶ ಸಮಿತಿ ಸಂಚಾಲಕರು** : ಶ್ರೀ ಕೊಕ್ರಾಡಿ ಸುರೇಶ ರಾವ್, ಉಡುಪಿ ಮತ್ತು ಬಳಗ

**ವೇದಿಕೆ ಸಮಿತಿ ಸಂಚಾಲಕರು** : ಶ್ರೀ ವೈ. ಸುದರ್ಶನ ರಾವ್, ಆದಮಾರು ಮತ್ತು ಬಳಗ

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಧ್ಯೇಯೋದ್ದೇಶಗಳು

★ ಸ್ಥಾನಿಕರ ಸ್ವಾಭಿಮಾನ ಜಾಗೃತಿ ಸಮಾವೇಶ ಹಾಗೂ ಸ್ಥಾನಿಕ ಸಮಾಜದ ಅಭಿವೃದ್ಧಿ ಕುರಿತಾಗಿ ಚಿಂತನ ಮಂಥನ
★ ಧಾರ್ಮಿಕ ಆಚರಣೆಗಳ ಮಹತ್ವದ ಬಗ್ಗೆ ಅರಿವನ್ನು ಮೂಡಿಸುವುದು
★ ಸ್ಥಾನಿಕರ ಸಾಮಾಜಿಕ ಹಿನ್ನಲೆ ಮತ್ತು ಚರಿತ್ರೆಯ ಕುರಿತು ಅರಿವು ಮೂಡಿಸುವುದು
★ ಸ್ಥಾನಿಕರ ಸಾಮಾಜಿಕ ಸ್ಥಾನಮಾನದ ಕುರಿತು ವಿವೇಚನೆ
★ ಸ್ಥಾನಿಕರ ಭಾಷಾ ವೈಶಿಷ್ಟ್ಯದ ಕುರಿತು ವಿವೇಚನೆ
★ ಗುರುಮಠದ ಸಂಬಂಧದ ಕುರಿತು ಜಾಗೃತಿ ಮೂಡಿಸುವುದು
★ ವಧೂ-ವರರ ಸಮಾವೇಶ/ಮಹಿಳಾ/ವೈದಿಕ ಮೊದಲಾದ ಸಮಾಜಮುಖಿ ಗೋಷ್ಠಿಗಳು
★ ಸ್ಥಾನಿಕರ ಸಾಂಸ್ಕೃತಿಕ ಆಯಾಮದ ಕುರಿತು ವಿಮರ್ಶೆ ಹಾಗೂ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸುವುದು.
★ ವಿವಿಧ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳಿಂದ ಬೋಧನಾತ್ಮಕ ಉಪನ್ಯಾಸಗಳು
★ ಸಾಂಸ್ಕೃತಿಕ ವೈಭವದ ಸಾಕ್ಷಾತ್ಕಾರ ಹಾಗೂ ಸಮಾಜದ ಸರ್ವರ ಸೌಹಾರ್ದ ಮಿಲನಕ್ಕಾಗಿ ವೇದಿಕೆ ನಿರ್ಮಾಣ

## ವಧೂವರರ ಸಮಾವೇಶ

ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಅಂಗವಾಗಿ ದಿನಾಂಕ ಮೇ 12 ಮತ್ತು 13ರಂದು ಶ್ರೀಶಾರದಾ ಮಂಟಪದಲ್ಲಿ ನಮ್ಮ ಸಮಾಜದ ಎಲ್ಲ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ವಧೂವರರ ಸಮಾವೇಶ ಜರಗಲಿದೆ. ಈ ಸಮಾವೇಶದಲ್ಲಿ ನಮ್ಮ ಸಮಾಜದ ವಿವಾಹಯೋಗ್ಯ ವಧೂವರರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಹಿರಿಯರೊಂದಿಗೆ ಭಾಗವಹಿಸಿ, ಇದರ ಸದುಪಯೋಗವನ್ನು ಪಡೆಯಬೇಕಾಗಿ ಅಪೇಕ್ಷೆ.

- ಕಾರ್ಯದರ್ಶಿ, ಅಖಿಲಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ, ಉಡುಪಿ.

## ಜೇಸಿ ಯನ್. ಸುಧಾಕರ್‌ರಾವ್ ಇವರಿಗೆ ಕಮಲಪತ್ರ ಪ್ರಶಸ್ತಿ ಹಾಗೂ H.G.F. ಪ್ರಶಸ್ತಿ



ಬೆಳ್ಮಣ್ ಜೆ.ಸಿ.ಐ.ಯಲ್ಲಿ ನೀಡುವ ಅತ್ಯುತ್ತಮ ಸೇವೆಗಾಗಿ ಕಮಲಪತ್ರ ಪ್ರಶಸ್ತಿ ಹಾಗೂ ಕಾಪು ವಲಯ ಸಮ್ಮೇಳನದಲ್ಲಿ ವಲಯದ ಅತ್ಯುತ್ತಮ H.G.F. ಪ್ರಶಸ್ತಿಯನ್ನು ನಮ್ಮ ಸಮಾಜದವರೇ ಆದ ಹಿರಿಯ ಜೇಸಿ ಯನ್.ಸುಧಾಕರ್‌ರಾವ್ ಇವರಿಗೆ ನೀಡಿ ಗೌರವಿಸಲಾಯಿತು. ಇವರು ಬೆಳ್ಮಣ್ ಜೆ.ಸಿ. ಹಾಗೂ ABCD&E ಟ್ರಸ್ಟ್ ಇನ್ನಾ ಇವರು ಮಾಡುತ್ತಿರುವ ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್ ಹಾಗೂ ಉಚಿತ ಪುಸ್ತಕ ವಿತರಣೆ ಮಾಡುತ್ತಿರುವ ಡಾ| ದಯಾನಂದ ಎಸ್.ರಾವ್, ಬೆಂಗಳೂರು ಇವರು ಕೊಡುಗೆಯಾಗಿ ನೀಡುತ್ತಿರುವುದನ್ನು ಬೆಳ್ಮಣ್, ಇನ್ನಾ, ಪಲಿಮಾರ್‌ಗಳಲ್ಲಿ ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ. ಪ್ರಕೃತ ಇವರು ಶ್ರೀವಿದ್ಯಾ ಬೋಧಿನಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಇವರನ್ನು ಲಯನ್ ಡಾ| ರವೀಂದ್ರನಾಥ ಹೆಗ್ಡೆಯವರು ಸನ್ಮಾನಿಸಿದರು. -ಎನ್.ಸುಧಾಕರ್‌ರಾವ್

## ಭರತನಾಟ್ಯ ವಿದುಷಿ ಯನ್.ಸುಮಾ ಜಯದೀಪ್ ಇವರಿಗೆ ಬೆಳ್ಮಣ್ ಜೇಸಿ ನೃತ್ಯ ಹಾಗೂ ಸಂಗೀತ ಶಾಲೆಯಿಂದ ಸನ್ಮಾನ



ಯನ್.ಸುಮಾ ಜಯದೀಪ್ 14 ವರ್ಷ ಬೆಳ್ಮಣ್ ಜೇಸಿ ನೃತ್ಯ ಶಾಲೆಯಲ್ಲಿ ಚಂದ್ರಶೇಖರ ನಾವುಡರಿಂದ ಭರತನಾಟ್ಯ ಆರಂಭಿಸಿ ಸುಬ್ರಹ್ಮಣ್ಯ ನಾವುಡರಿಂದ ತರಬೇತಿ ಪಡೆದು ವಿಶಿಷ್ಟಶ್ರೇಣಿಯಲ್ಲಿ ಭರತನಾಟ್ಯ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರಿಗೆ ನೃತ್ಯ ಶಾಲೆ ಹಾಗೂ ಜೇಸಿಯ ಪರವಾಗಿ J.F.M. ವೈ.ಸುಕುಮಾರ್, ಮಾಜಿ ವಲಯಾಧ್ಯಕ್ಷರು ಗೌರವಿಸಿದರು. ಪ್ರಾಂಶುಪಾಲರಾದ ಜಯಂತ್ ರಾವ್ ರಾಜನ ಪ್ರತಿಮೆ ನೀಡಿ ಹರಸಿದರು. ಲ| ವಿಠಲ ತಂತ್ರಿಯವರು ಫಲಪುಷ್ಪ ನೀಡಿ ಗೌರವಿಸಿದರು. ಜೇಸಿ ಅಧ್ಯಕ್ಷ ಸತೀಶ್ ಸ್ವಾಗತಿಸಿ, ದೀಪಕ್ ಕಾಮತ್ ವಂದಿಸಿದರು. ತಾಲೂಕು ಪಂಚಾಯತ್ ಅಧ್ಯಕ್ಷ ಜಯರಾಮ್ ಸಾಲ್ಯಾನ್ ಅಧ್ಯಕ್ಷತೆ ವಹಿಸಿದ್ದರು. -ಎನ್.ಸುಧಾಕರ್‌ರಾವ್

## ಶೃಂಗೇರಿ ತಾಲೂಕು ಐದನೇ ಚುಟುಕು ಸಾಹಿತ್ಯ ಸಮ್ಮೇಳನ

### ಕಲೆಗಳಿಗೆ ಜನಪ್ರಿಯತೆ ಮಾತ್ರ ಇದ್ದರೆ ಸಾಲದು-ಶ್ರೀಕೃಷ್ಣಯ್ಯ ಅನಂತಪುರ



ಶೃಂಗೇರಿ ತಾಲೂಕು ಐದನೇ ಚುಟುಕು ಸಾಹಿತ್ಯ ಸಮ್ಮೇಳನ ಮತ್ತು ಸಾಹಿತ್ಯ ಮತ್ತು ಸಂಸ್ಕೃತಿ ಉತ್ಸವ 2012, ಜನವರಿ 20, 21 ಮತ್ತು 22ರಂದು ಮೆಣಸೆ ಶಾಸಕರ ಸರ್ಕಾರಿ ಮಾದರಿ ಶಾಲೆಯಲ್ಲಿ ಎಸ್.ವಿ. ಪರಮೇಶ್ವರ ಭಟ್ಟ ಸಭಾಮಂಟಪ ಅಜ್ಜಂಪುರ ಜಿ.ಸೂರಿ ವೇದಿಕೆಯಲ್ಲಿ ಜರಗಿತು. ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿಯ ಪ್ರಧಾನ ಸಂಚಾಲಕರಾದ ಡಾ| ಎಂ.ಜಿ.ಆರ್.ಅರಸ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಚಂದ್ರಪ್ಪ, ಸಮ್ಮೇಳನ ಸಮಿತಿಯ ಗೌರವಾಧ್ಯಕ್ಷರಾದ ಬಿ. ಶಿವ ಶಂಕರ್, ಕನ್ನಡ ಸಾಹಿತ್ಯ ಪರಿಷತ್ತಿನ ಚಟ್ನಳ್ಳಿ ರಮೇಶ್ ರತ್ನಮ್ಮ ಹಾಲಪ್ಪ ಗೌಡ, ಆನಂದ ಶಿವನಿ ಮೊದಲಾದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ದಿನಾಂಕ 21-01-2012ರಂದು ಶ್ರೀಕೃಷ್ಣಯ್ಯ ಅನಂತಪುರ ಅವರು ಚುಟುಕು ಕವಿಗೋಷ್ಠಿಯ ಅಧ್ಯಕ್ಷ ಸ್ಥಾನ ವಹಿಸಿ ಮಾತನಾಡುತ್ತ ''ಚುಟುಕು ಕಾವ್ಯಕ್ಕೆ ಜನಪ್ರಿಯತೆ ಇದೆ ಎಂಬುದೇನೋ ಸರಿ. ಆದರೆ ಜನಪ್ರಿಯತೆ ಮಾತ್ರ ಇದ್ದರೆ ಸಾಕೇ? ಜನಪ್ರಿಯತೆ ಮಾತ್ರ ಯಾವುದೇ ಕಲೆಯ ಮೌಲ್ಯವನ್ನು ನಿರ್ಣಯಿಸುವ ಮಾನದಂಡ ವಾಗಲಾರದು. ಜನಪ್ರಿಯತೆಯ ಜತೆಗೆ ತನ್ನ ತೂಕವನ್ನು ಹೆಚ್ಚಿಸಿಕೊಂಡು ಚುಟುಕು ಕಾವ್ಯ ಜನರ ಗೌರವವನ್ನು ಸಂಪಾದಿಸುವ ಅಗತ್ಯ ಬಹಳಷ್ಟಿದೆ'' ಎಂದು ಅಭಿಪ್ರಾಯಪಟ್ಟರು. ''ಚುಟುಕದಲ್ಲಿ ಹಾಸ್ಯ'' ಎಂಬ ಕುರಿತು ಕವಿ ಡುಂಡಿರಾಜ ವಿಶೇಷ ಉಪನ್ಯಾಸ ನೀಡಿದರು. ಕವಿ ಸುಬ್ರಾಯ ಚೊಕ್ಕಾಡಿ ಸಮಾರೋಪ ಭಾಷಣ ಮಾಡಿದರು. ವಿವಿಧ ಗೋಷ್ಠಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.

-ಶ್ರೀಮತಿ ಜಯಶ್ರೀ ಕೃಷ್ಣಯ್ಯ

## ಅಂಬಲಪಾಡಿಯಲ್ಲಿ ರಂಗಯ್ಯ ಹೆಬ್ಬಾರ್ ದಂಪತಿಗಳಿಗೆ ಸಮ್ಮಾನ




ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದಲ್ಲಿ ಕಳೆದ 35 ವರುಷಗಳಿಂದ ಪಾಟಾಳಿ ಕೆಲಸವನ್ನು ನಿರ್ವಹಿಸಿ, ಇದೀಗ ಸ್ವಯಂ ನಿವೃತ್ತಿಗೊಂಡ ಶ್ರೀ ರಂಗಯ್ಯ ಹೆಬ್ಬಾರ್ ದಂಪತಿಗಳನ್ನು ದೇವಸ್ಥಾನದ ಧರ್ಮದರ್ಶಿಗಳಾದ ಶ್ರೀ ವಿಜಯ ಬಲ್ಲಾಳರು ಫೆಬ್ರವರಿ 26ರಂದು ಗಣ್ಯರ ಸಮ್ಮುಖದಲ್ಲಿ ಪಟ್ಟೆ, ಸೀರೆ, ಚಿನ್ನದ ಉಂಗುರವನ್ನು ನೀಡಿ ಸಮ್ಮಾನಿಸಿದರು.

-ಎಚ್.ಎನ್.ಶ್ಯಾನುಭಾಗ್

## ಉಡುಪಿ-ಗುಂಡಿಬೈಲಿನಲ್ಲಿ ಶ್ರೀ ಮನಾಹೆಬ್ಬಾರರ ಹರಿಕಥಾ ಕಾರ್ಯಕ್ರಮ

ಶ್ರೀ ರವಿಶಂಕರ ಗುರೂಜಿಯವರ 'ಆರ್ಟ್ ಆಫ್ ಲಿವಿಂಗ್' ಸಂಸ್ಥೆಯ ಸತ್ಸಂಗದ ಆಶ್ರಯದಲ್ಲಿ ಇದೇ ತಾ.02-03-2012ರ ಶುಕ್ರವಾರದಂದು ಸಂಜೆ ಗುಂಡಿಬೈಲಿನಲ್ಲಿರುವ ಸತ್ಸಂಗ ಕಚೇರಿಯಲ್ಲಿ ಶ್ರೀ ಮ.ನಾ.ಹೆಬ್ಬಾರರಿಂದ 'ಭಕ್ತ ಪುರಂದರದಾಸ' ಎಂಬ ಕಥಾಭಾಗದ ಹರಿಕಥಾ ಕಾರ್ಯಕ್ರಮ ಜರಗಿತು. ಕಾರ್ಯಕ್ರಮದ ಕೊನೆಯಲ್ಲಿ ಸತ್ಸಂಗದ ಸಕ್ರಿಯ ಸದಸ್ಯರಾದ ಶ್ರೀ ಉದಯ್‌ರವರು ಧನ್ಯವಾದ ಸಮರ್ಪಿಸಿ, ಫಲ-ಪ್ರಸಾದ-ಸಂಭಾವನೆಗಳನ್ನಿತ್ತು ಮಾನ್ಯ ಹರಿದಾಸರನ್ನು ಗೌರವಿಸಿದರು.

## WOMEN WHO MADE US PROUD

Society cannot progress without the strength of women who in olden days were thought as burden,

From Mother Theresa to Kiran Bedi various women who wore simple dress,

But were ready to scrifice their life for the society's progress.

Rani Lakshmi Bai, Channamma and Obavva fought to make India free from the hands of British.

Those British who looted India as they thought we were foolish. Indira Gandhi the first Primeminister of ourcountry took its name and fame to a higher degree,

Kamala Gandhi & Sarojini Naidu are women who inspire everyone including you and me.

As all these are the women of India who have made India proud,

I am sure that the young generation of girls will make India pure and useful as cloud.

-Pragathi Bhandi, Perdoor, 10th Std., MJC, Manipal




# ಮಹಾವಿಜ್ಞಾನಿ, ಪ್ರಸಿದ್ಧ ತತ್ವಜ್ಞಾನಿ, ಕೊಡುಗೈದಾನಿ ಡಾ। ದಯಾನಂದ ಎಸ್.ರಾವ್ ಇನ್ನಿಲ್ಲ

-ವೈ.ಮೋಹನರಾವ್

ಡಾ। ದಯಾ ನಂದ ಎಸ್.ರಾವ್. ಮೂಲ್ಕಿಯ ಸಮೀಪದ ಮಾಂಟ್ರಾಡಿ ಸಚ್ಚಿದಾನಂದರಾವ್ ದಂಪತಿಗಳ ಪುತ್ರ. ಇವರ ಜನನ 1929ರಲ್ಲಿ. ಇವರಿಗೆ ವಿದ್ಯಾರ್ಜನೆಯಲ್ಲಿ ಅತೀವ ಆಸಕ್ತಿ. ವಿಜ್ಞಾನ ಇವರ ಮೆಚ್ಚುಗೆಯ ವಿಷಯ. ಇಂಗಾಲ ಸಂಯುಕ್ತಗಳ ಸಾವಯವ ರಸಾಯನ ಶಾಸ್ತ್ರದಲ್ಲಿ (ಓರ್ಗ್ಯಾನಿಕ್ ಕೆಮಿಸ್ಟ್ರಿ) ಎಂ.ಎಸ್.ಸಿ.; ಪಿ.ಎಚ್.ಡಿ. ಪದವಿ ಪಡೆದ ನಂತರ ಅಮೇರಿಕನ್ ಕೆಮಿಕಲ್ ಸೊಸೈಟಿಯ ಪೆಟ್ರೋಲಿಯಂ ರಿಸರ್ಚ್ ಫಂಡ್‌ನ (ಯುಎಸ್ಎ) ನಿಯೋಜನೆಯಲ್ಲಿ ಎರಡು ವರ್ಷಗಳ ಅಧ್ಯಯನಕ್ಕಾಗಿ ಯು.ಎಸ್.ಎ.ಗೆ ಹೋದರು (1958-1960). ಅಧ್ಯಯನ ಮುಗಿದ ಕೂಡಲೇ ಪಿಟ್ಸ್‌ಬರ್ಗ್ ಯುನಿವರ್ಸಿಟಿಯ ರಸಾಯನಶಾಸ್ತ್ರ ವಿಭಾಗವನ್ನು ಸೇರಿ ಅಧ್ಯಯನ ಮುಂದುವರೆಸಿದರು. ಅಮೇರಿಕಾದಲ್ಲಿ MBA ಪದವಿ ಮುಗಿಸಿ 1963ರಲ್ಲಿ ಭಾರತಕ್ಕೆ ಮರಳಿದ ದಯಾನಂದರಾಯರು ಮೊದಲು ಅಮರ್ ಡೈ ಕೆಮ್ ಲಿ. ಹಾಗೂ ನಂತರ ಕಲರ್ ಕೆಮ್ ಲಿ. ಕಂಪೆನಿಗಳಲ್ಲಿ 16 ವರ್ಷ ಕಾಲ ಉನ್ನತ ಅಧಿಕಾರಿಯಾಗಿ ಕೆಲಸ ಮಾಡಿ ತನ್ನ ಅನುಭವವನ್ನು ಕಂಪೆನಿಗೆ ಧಾರೆ ಎರೆದರು. 1980ರಲ್ಲಿ ಕಲರ್‌ಕೆಮ್ ಕಂಪೆನಿಗೆ ವಿದಾಯ ಹೇಳಿ 1981ರಲ್ಲಿ ತಮ್ಮದೇ ಆದ ರೆಮಿಡೆಕ್ಸ್ ಫಾರ್ಮ್ ಪ್ರೈವೇಟ್ ಲಿ. ಕಂಪೆನಿಯನ್ನು ಆರಂಭಿಸಿದರು. 1986ರ ಸುಮಾರಿಗೆ ಕಂಪೆನಿಯು ನೆಲೆಗಟ್ಟಿಗೊಳ್ಳ ತೊಡಗಿತು. ರೆಮಿಡೆಕ್ಸ್‌ನ ಜೊತೆ 1990ರಲ್ಲಿ ಸನಿಲ್ ಫಾರ್ಮಾಸೂಟಿಕಲ್ಸ್ ಪ್ರೈ. ಲಿ. ಹಾಗೂ 1995ರಲ್ಲಿ ಇಶಾನ್ ಲ್ಯಾಬ್ಸ್ ಪ್ರೈ. ಲಿ. ಸಂಸ್ಥೆಗಳನ್ನು ಹುಟ್ಟುಹಾಕಿದರು.

ದಯಾನಂದ ರಾಯರ ಪ್ರೌಢಶಾಲಾ ವಿಧ್ಯಾಭ್ಯಾಸದಲ್ಲಿ ಸಂಸ್ಕೃತ ಅವರ ಮೂರನೇ ಭಾಷಾ ಪಠ್ಯವಾಗಿತ್ತು. 1964ರಿಂದ ಸಂಸ್ಕೃತದ ಸಂಪರ್ಕ ಬಿಟ್ಟು ಹೋಯಿತು. 18 ವರ್ಷಗಳ ನಂತರ ಸ್ವತಃ ಅಭ್ಯಾಸ ಮಾಡಿ ಭಗವದ್ಗೀತೆ, ವೇದ ಉಪನಿಷತ್ತುಗಳನ್ನು ಮೂಲ ಸಂಸ್ಕೃತದಲ್ಲಿ ಓದುವಷ್ಟು ಜ್ಞಾನ ಪಡೆದರು. ಈ ಪ್ರಯಾಸದ ಕೆಲಸದಲ್ಲಿ ಆಪ್ಟೆಯವರ ಶಬ್ದಕೋಶ ಅವರಿಗೆ ದಾರಿ ದೀಪವಾಗಿತ್ತು. ಶ್ರಮಜೀವಿಯ ಬದುಕಿನಲ್ಲೆದ್ದ ಪ್ರೇಮ ತರಂಗಗಳನ್ನು ಖ್ಯಾತ ಸಂಗೀತ ನಿರ್ದೇಶಕರಿಂದ ಸಂಗೀತಕ್ಕೆ ಅಳವಡಿಸಿದರು. ರಾಷ್ಟ್ರದ ಖಾತ ಸಂಗೀತ ನಿರ್ದೇಶಕರು ಮತ್ತು ಗಾಯಕರು ಹಾಡಿದ ಅವರ 15ಕ್ಕೂ ಹೆಚ್ಚು ಧ್ವನಿಸುರುಳಿಗಳು ಪ್ರಸಿದಿ ಗಳಿಸಿವೆ.



ತಾನು ಹುಟ್ಟಿ ಬೆಳೆದ ಈ ಭೂಮಿಗೆ, ತಾನು ಬೆಳೆದು ಬಂದ ಈ ಸಮಾಜಕ್ಕೆ, ತನ್ನನ್ನು ನೀರು, ಗಾಳಿ, ಬೆಳಕಿತ್ತು ಪೋಷಿಸಿದ ಈ ಪ್ರಕೃತಿಗೆ ಏನನ್ನಾದರೂ ಕೊಡಬೇಕು. ಈ ಬ್ರಹ್ಮಾಂಡವೆಲ್ಲ ಪರಮಾತ್ಮ ಹಾಗೂ ಆತನ ಸೃಷ್ಟಿ, ಇಲ್ಲಿ ಕಾಣುವ ಎಲ್ಲಾ ಚರಾಚರಗಳಲ್ಲಿ ಅವನೇ ಇದ್ದಾನೆ. ತನ್ನ ಸುತ್ತಮುತ್ತ ಇರುವ, ಅತ್ತ ಇತ್ತ ಸುಳಿದಾಡಿ ಬದುಕುತ್ತಿರುವ ಎಲ್ಲರ ಹೃದಯದಲ್ಲೂ ಪರಮಾತ್ಮನ ಅಸ್ತಿತ್ವವಿದೆ. ಎಲ್ಲರನ್ನು ತನ್ನಂತೆ ಭಾವಿಸಿ ಪ್ರೀತಿಸಿ ಬೆಳೆದರೆ ಈ ವಿಶ್ವವೇ ಭಗವಂತನ ಪ್ರೇಮ ಭೂಮಿಯಾಗುತ್ತದೆ ಎಂಬ ಸಿದಾಂತದಲ್ಲಿ ಸಾಂತ್ವನವನ್ನು ಕಂಡ ಡಾ। ದಯಾನಂದ ಎಸ್. ರಾಯರು “ವಿಶ್ವದ ಒಬ್ಬೊಬ್ಬ ವ್ಯಕ್ತಿಯ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ವಿದ್ಯಾರ್ಜನೆಯೇ ಸೋಪಾನ” ಎನ್ನುತ್ತಾರೆ. ಯಾರಿಗಾದರೂ ಕೊಡಲು ಶಕ್ತನಾದರೆ ನನ್ನ ಮೊದಲ ಆದ್ಯತೆ ವಿದ್ಯಾರ್ಜನೆಗೆ ಸಹಾಯಮಾಡುವುದು ಎಂಬ ತತ್ವಕ್ಕೆ ಬದರಾದ ಅವರು ಡಾ। ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್ ಸ್ಥಾಪಿಸಿದ್ದಾರೆ. ಬದುಕಿನ ಹೋರಾಟದಲ್ಲಿ ತನಗೆ ಭೀಮಬಲವಾಗಿ ಜತೆನೀಡಿದ ವಿದ್ಯೆಯನ್ನು, ತಾನು ಏರಿಬಂದ ಏಣಿಯನ್ನು ಎಂದೂ ಮರೆತವರಲ್ಲ. ಆದುದರಿಂದ ಅವರು ಸ್ಥಾಪಿಸಿದ ಟ್ರಸ್ಟ್ ಅರ್ಹ ಬಡ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಬೇಕಾದ ವಿದ್ಯಾರ್ಥಿ ವೇತನವನ್ನು ಸಾಲ ರೂಪದಲ್ಲಿ ನೀಡುತ್ತದೆ. (ಸಾಲ ವಿದ್ಯಾರ್ಥಿ ವೇತನ). ಅರ್ಹತೆಯುಳ್ಳ ಬುದಿವಂತ ವಿದ್ಯಾರ್ಥಿಗಳು ಬಡತನದ ಕಾರಣಕ್ಕಾಗಿ ವಿದ್ಯೆಗೆ ತಿಲಾಂಜಲಿ ನೀಡುವಂತಾಗ ಬಾರದು ಅಥವಾ ಅವರ ವಿದ್ಯಾರ್ಜನೆ ಅವರ ಹೆತ್ತವರ ಮೇಲೆ ಅನಗತ್ಯ ಹೊರೆಯಾಗ ಬಾರದು. ಈ ಸ್ಪರ್ಧಾತ್ಮಕ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ವಿಜ್ಞಾನಿಗಳು, ವೈದ್ಯರು, ಇಂಜಿನಿಯರುಗಳು, ತಂತ್ರಜ್ಞರಿಗೆ ಎಲ್ಲೆಡೆ ಬೇಡಿಕೆ ಇದೆ. ತಾನು ಆಯ್ದುಕೊಂಡ ಕ್ಷೇತ್ರದಲ್ಲಿ ಸೂಕ್ತ ಪದವಿ ಪಡೆದುಬಂದ ಉತ್ತಮ ದಾಖಲೆ ಹೊಂದಿರುವ ಅಭ್ಯರ್ಥಿ ಸುಲಭದಲ್ಲಿ ಉದ್ಯೋಗ ಗಳಿಸುತ್ತಾನೆ. ಅಂತಹ ವಿದ್ಯಾರ್ಥಿಗಳಿಗೆ ಸಹಕಾರ ನೀಡಿ ಅವರು ಒಳ್ಳೆಯ ವೇತನ ಪಡೆದು ಸಭ್ಯ ಜೀವನ ನಡೆಸಬೇಕೆಂಬುದೇ ಟ್ರಸ್ಟ್‌ನ ಮೂಲ ಧ್ಯೇಯ.

ಅರ್ಹ ವಿದ್ಯಾರ್ಥಿಗಳಿಗೆ ಸಾಲ ರೂಪದಲ್ಲಿ ವಿದ್ಯಾರ್ಥಿ ವೇತನ ನೀಡುವ ಉದ್ದೇಶದಿಂದ ನಮ್ಮ ಸಮಾಜದ ಪ್ರತಿಷ್ಠಿತ ಸಾಮಾಜಿಕ ಸಂಘಟನೆಗಳಿಗೆ ಡಾ। ದಯಾನಂದ ಎಸ್.ರಾವ್ ಎಜ್ಯುಕೇಶನ್ ಟ್ರಸ್ಟ್ ಸಾಲನಿಧಿಯನ್ನು ಮಂಜೂರು ಮಾಡುತ್ತದೆ. ಅದಕ್ಕೆ ಅವರ ಕಟ್ಟುನಿಟ್ಟಿನ ಷರತ್ತುಗಳಿವೆ. ಅದರ ಉದ್ದೇಶ ಹಣ ಹರಿಹಂಚಾಗಿ ಹೋಗಬಾರದು. ಅದು ವಿದ್ಯೆಗೆ ಒದಗಬೇಕು. ವಿದ್ಯೆ ಕಲಿತು ಉದ್ಯೋಗ ಪಡೆದ ನಂತರ ಪಡೆದವನು ಅದನ್ನು ಮರಳಿಸುವ ಜವಾಬ್ದಾರಿ ಪಡೆದವನಿಗಿರಬೇಕು. ಅದು ಮತ್ತೆ ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಸಾಲರೂಪದಲ್ಲಿ ಸಿಗುವಂತಾಗಬೇಕು. ಎಂಬುದೇ ಹೊರತು ಬೇರೇನಲ್ಲ. ವಿವಿಧ ಸಾಮಾಜಿಕ ಸಂಘಟನೆಗಳು ಟ್ರಸ್ಟ್‌ನ ಷರತ್ತುಗಳಿಗುಣವಾಗಿ ವಿದ್ಯಾರ್ಥಿ ಗಳಿಂದ ಅರ್ಜಿ ಆಹ್ವಾನಿಸಿ ಅರ್ಹರಿಗೆ ಸಾಲ ವಿದ್ಯಾರ್ಥಿ ವೇತನ ನೀಡುತ್ತವೆ.

ಖ್ಯಾತ ಅಂತಾರಾಷ್ಟ್ರೀಯ ವಿಜ್ಞಾನಿ ಮತ್ತು ಆಧ್ಯಾತ್ಮಿಕ ಸಂತ ಶ್ರೇಷ್ಠರಾಗಿದ್ದ ಅವರು ಸಚ್ಚಿದಾನಂದೆ ಪಬ್ಲಿಕೇಷನ್ ಮೂಲಕ ಶ್ರೀಕೃಷ್ಣಾನುಗಾಮಿ ಚೈತನ್ಯ, ಇಷ್ಟ ದೇವತಾ ಸ್ತೋತ್ರ, ಶಿರಡಿ ಕ್ಷೇತ್ರ ದರ್ಶನಂ ಮುಂತಾದ ಬೃಹತ್ ಗ್ರಂಥಗಳನ್ನು ಸಂಸ್ಕೃತ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ರಚಿಸಿದ್ದು ಅವು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಡಾ। ದಯಾನಂದ ಎಸ್.ರಾವ್ ಇವರಿಗೆ ಭಾರತ ಸರಕಾರದ “ಉದ್ಯೋಗ್ ಎಕ್ಸ್‌ಲೆನ್ಸ್ ಅವಾರ್ಡ್”, “ಗ್ಲೋರಿಯಾ ಆಫ್ ಇಂಟರ್ ನ್ಯಾಶನಲ್” ಅವಾರ್ಡ್, “ಇಂದಿರಾಗಾಂಧಿ ಪ್ರಿಯದರ್ಶಿನಿ” ಅವಾರ್ಡ್, “ವಿಕಾಸ ರತ್ನ” ಅವಾರ್ಡ್, “ವಿಶ್ವೇಶ್ವರಯ್ಯ ಪ್ರಶಸ್ತಿ”ಗಳು ಒಲಿದಿವೆ.

ಸಂಸ್ಕೃತ ಕ್ಷೇತ್ರದ ವಿಶೇಷ ಸಾಧನೆಗಾಗಿ ಶ್ರೀ ಪೇಜಾವರ ರಾಮವಿಠಲ ಪ್ರಶಸ್ತಿ ಹಾಗೂ ರಾಜ್ಯಪಾಲರ ಪುರಸ್ಕಾರ, ಜೀವಮಾನದ ಸಾಧನೆ ಪುರಸ್ಕಾರ ಸಹಿತ ಹಲವು ಪುರಸ್ಕಾರ ಪಡೆದಿದ್ದ ಇವರು ಹಲವು ಸಂಘ-ಸಂಸ್ಥೆ ಗಳಿಂದ ಸಮ್ಮಾನಿತರಾಗಿದ್ದರು.

ರಾಯರ ಯಶಸ್ಸಿನ ಹಿಂದೆ ಅವರ ಪತ್ನಿ ಶ್ರೀಮತಿ ಮೋಹಿನಿರಾವ್ ಅವರ ಸಹಕಾರವಿದೆ. ಡಾ। ರಾವ್ ದಂಪತಿಗಳಿಗೆ ಇಬ್ಬರು ಮಕ್ಕಳು. ಮಗ ಸನತ್ ಮತ್ತು ಮಗಳು ಡಾ। ನೀಲಿಮಾ.

ಕೊಡುಗೈದಾನಿ ಮತ್ತು ಅಜಾತಶತ್ರುವಾಗಿದ್ದ ಇವರು ಹಲವು ದೇವಸ್ಥಾನ, ಸಂಘ-ಸಂಸ್ಥೆ ಮತ್ತು ವಿದ್ಯಾಕ್ಷೇತ್ರಗಳ ಅಭಿವೃದಿಗೆ ನೆರವು ನೀಡಿದ್ದಾರೆ. ಇವರ ತಾಯಿ ರತ್ನಾಬಾಯಿಯವರ ಹೆಸರಿನಲ್ಲಿ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಲ್ಲಿ ಸಾಲ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಇವರು ಶ್ರೀಶಾರದಾ ಪತ್ರಿಕೆಯ ಮಹಾಪೋಷಕ ರಾಗಿ ಪ್ರೋತ್ಸಾಹಿಸಿದ್ದಾರೆ.

ಡಾ। ದಯಾನಂದ ಎಸ್.ರಾವ್ (82) ಅಸೌಖ್ಯದಿಂದ 21-02-2012ರಂದು ಬೆಂಗಳೂರಿನ ಸ್ವಗೃಹದಲ್ಲಿ ನಿಧನ ಹೊಂದಿದರು. ಅಗಲಿದ ಡಾ। ದಯಾನಂದ ಎಸ್.ರಾವ್ ಇವರಿಗೆ ನುಡಿನಮನ ಸಲ್ಲಿಸಿ, ಚಿರಶಾಂತಿಯನ್ನು ಕೋರಿ, ಶ್ರೀಶಾರದಾ ಮಂಟಪದ ಆಡಳಿತ ಮಂಡಳಿಯ ಸಭೆಯಲ್ಲಿ ಶ್ರದಾಂಜಲಿಯನ್ನು ಅರ್ಪಿಸಲಾಯಿತು. □

(ಕೃಪೆ : ವಿವಿಧ ಮೂಲಗಳು)

# ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ)

ಈ ಆಸ್ಪತ್ರೆಗೆ ಸಂಬಂಧಿಸಿದಂತೆ ಒಂದು ಚಿಕಿತ್ಸಾ ಕೇಂದ್ರ ಮತ್ತು ಆಯುರ್ವೇದ ಸಂಶೋಧನಾ ಕೇಂದ್ರವನ್ನು ಆರಂಭಿಸಲು ಶ್ರೀ ಶಂಕರರ ಜನ್ಮಭೂಮಿಯಾದ ಕಾಲಟಿಯಲ್ಲಿ ಪೂರ್ವಭಾವೀ ಸಿದ್ಧತೆಗಳು ನಡೆಯುತಿವೆ. ಕಾಲಟಿಯ ಸಮೀಪದಲ್ಲಿರುವ ಮಲಯತ್ತೂರ್ ಎಂಬಲ್ಲಿ ನಡೆಸಲಾಗುತ್ತಿರುವ ‘ಶೃಂಗೇರಿ ಆಯುರ್ವೇದ ಧಾಮ’ ಈಗಾಗಲೇ ಸಾಕಷ್ಟು ಚಿಕಿತ್ಸಾ ಸೌಲಭ್ಯಗಳನ್ನು ಹೊಂದಿ, ಜನಪ್ರಿಯವಾಗಿದೆ.

ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ನರಸಿಂಹವನದಲ್ಲಿ ತಮ್ಮ ಪರಮಗುರುಗಳು ಮತ್ತು ಪರಮೇಷ್ಠಿ ಗುರುಗಳ ಅಧಿಷ್ಠಾನ ಮಂದಿರಗಳ ಸಾಲಿನಲ್ಲಿ ತಮ್ಮ ಗುರುಗಳಾದ ಶ್ರೀ ಶ್ರೀ ಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಸುಂದರವೂ, ಭವ್ಯವೂ ಆದ ಅಧಿಷ್ಠಾನ ಮಂದಿರವನ್ನು ನಿರ್ಮಿಸಿದರು. ಅದರಲ್ಲಿ ಪ್ರತಿಷ್ಠಾಪಿಸಿರುವ ಮಹಾಸನ್ನಿಧಾನಂಗಳವರ ಅಮೃತ ಶಿಲೆಯ ಮೂರ್ತಿ ಸಹಜತೆಯಿಂದ ಕೂಡಿದ್ದು, ಚಿತ್ತಾಕರ್ಷಕವಾಗಿದೆ. ಶಾರದಾಂಬಾ ದೇವಾಲಯದಿಂದ ನರಸಿಂಹ ವನಕ್ಕೆ ಹೋಗಲು ಒಂದು ಉಪಯುಕ್ತ ಸೇತುವೆ ಬೇಕೆಂದು, ಅದರ ನಿರ್ಮಾಣ ಕಾರ್ಯವನ್ನು ಆರಂಭಿಸಿದವರು ಜಗದ್ಗುರು ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು. ಈ ದೊಡ್ಡ ಯೋಜನೆಯನ್ನು ಯಶಸ್ವಿಯಾಗಿ ಪೂರೈಸಿ, ತಮ್ಮ ಗುರುಗಳ ನೆನಪಿಗಾಗಿ ಅದಕ್ಕೆ ‘ವಿದ್ಯಾತೀರ್ಥ ಸೇತು’ ಎಂದು ಹೆಸರಿಟ್ಟು, 1991ರಲ್ಲಿ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಅದನ್ನು ಲೋಕಾರ್ಪಣೆ ಮಾಡಿದರು. ಶೃಂಗೇರಿಗೆ ಬರುವ ಶ್ರೀಮಠದ ಶಿಷ್ಯರು, ಭಕ್ತರು ಮತ್ತು ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಶಾರದಾಕೃಪಾ, ಯಾತ್ರೀ ನಿವಾಸ, ಶಾಂತಿ ಕುಟೀರಗಳು, ಅತಿಥಿಭವನಗಳು, ಶ್ರೀಮಠದ ಎದುರಿನ ಭಾರತೀ ಬೀದಿಯಲ್ಲಿ ಇತ್ತೀಚೆಗೆ ನಿರ್ಮಾಣಗೊಂಡ ಬಹಳ ದೊಡ್ಡದಾದ ಅತಿಥಿ ನಿವಾಸ-ಇವನೆಲ್ಲ ಇಲ್ಲಿ ಸ್ಮರಿಸಿಕೊಳ್ಳಬಹುದು. ಏಕಕಾಲದಲ್ಲಿ ಸುಮಾರು ಮೂರು ಸಾವಿರ ಜನ ಕುಳಿತು ಊಟ ಮಾಡಬಹುದಾದ, ಸಕಲ ಸೌಕರ್ಯಗಳನ್ನೊಳಗೊಂಡ ‘ಭಾರತೀ ತೀರ್ಥ ಪ್ರಸಾದ’ ಆಧುನಿಕ ತಂತ್ರಜ್ಞಾನದೊಂದಿಗೆ ನಿರ್ಮಾಣಗೊಂಡ ಒಂದು ವಿಶಿಷ್ಟ ಭೋಜನ ಶಾಲೆ. ಜಾತಿ-ಮತಗಳ ಭೇದವಿಲ್ಲದೆ ಪ್ರತಿನಿತ್ಯ ಸಹಸ್ರಾರು ಮಂದಿ ಇಲ್ಲಿ ಪ್ರಸಾದ ಸ್ವೀಕರಿಸುತ್ತಿರುವುದಲ್ಲದೆ, ಶೃಂಗೇರಿಯ ಸುತ್ತ-ಮುತ್ತಲಿನ ನಾಲ್ಕು ಊರುಗಳ ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳ ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ಇಲ್ಲಿಂದ ಪ್ರತಿನಿತ್ಯ ಶುಚಿ-ರುಚಿಯಾದ ಊಟವನ್ನು ಒದಗಿಸಲಾಗುತಿದೆ. ಊರಿನ ಮತ್ತು ಸಮೀಪದ ಅನೇಕ ಸಾರ್ವಜನಿಕ ಸಭೆ-ಸಮಾರಂಭಗಳಿಗೂ ಇಲ್ಲಿಂದಲೇ ಅಡುಗೆಯ ಪೂರೈಕೆ. ಶೃಂಗೇರಿಯಲ್ಲಿ ಮಾತ್ರವಲ್ಲದೆ ಬೆಂಗಳೂರು, ಮೈಸೂರು, ಸಿದ್ಧಾಪುರ, ಚೆನ್ನೈ, ಕಾಲಟಿ ಮೊದಲಾದ ಶಾಖಾ ಮಠಗಳಲ್ಲೂ ಒಂದಲ್ಲ ಒಂದು ವಿಧದ ನಿರ್ಮಾಣ ಕಾರ್ಯ ನಡೆಯುತ್ತಲೇ ಇರುತದೆ.

ಶ್ರೀಮಠದ ನರಸಿಂಹವನದಲ್ಲಿರುವ ‘ಗುರುನಿವಾಸ’ ಉಲ್ಲೇಖಿಸಲೇ ಬೇಕಾದ ಮತ್ತೊಂದು ಭವ್ಯವಾದ ಕಟ್ಟಡ. ಸಾವಿರಾರು ಮಂದಿ ಭಕ್ತರು ಯಾವುದೇ ವಿಧದ ಅಡೆತಡೆಗಳಿಲ್ಲದೆ ಗುರುಗಳವರ ದರ್ಶನ ಮಾಡಲು ಮತ್ತು ಶ್ರೀಶಾರದಾ-ಚಂದ್ರಮೌಳೀಶ್ವರರ ಪೂಜೆಯನ್ನು ವೀಕ್ಷಿಸಲು ಅತ್ಯಂತ ಉಪಯುಕ್ತವಾದ ಕಟ್ಟಡ ಇದು. ಪ್ರಾಚೀನ ಮತ್ತು ಆಧುನಿಕ ತಂತ್ರಜ್ಞಾನಗಳ ಸಮ್ಮಿಲನದೊಂದಿಗೆ ಪ್ರಕೃತಿಯ ಮಡಿಲಿನಲ್ಲಿ ರಾರಾಜಿಸುವ ಈ ‘ಗುರುನಿವಾಸ’ ನೋಡುಗರ ಹೃನ್ಮನಗಳನ್ನು ಸೆಳೆಯುತ್ತದೆ. ವಿದ್ಯಾರಣ್ಯಪುರದಲ್ಲಿ ರುವ ವೃದ್ಧಾಶ್ರಮ, ಕಾಳಿಕಾಂಬಾ ದೇವಾಲಯದ ಸಮೀಪದಲ್ಲಿ ನಿರ್ಮಿತವಾದ ಸುಸಜ್ಜಿತ ಕಲ್ಯಾಣ ಮಂಟಪ, ಸದ್ವಿದ್ಯಾಸಂ ಜೀವಿನಿ ಪಾಠಶಾಲೆಯ ಶತಮಾನೋತ್ಸವ ಭವನ, ಶ್ರೀಶಾರದಾಂಬೆಯ ದೇಗುಲದ ಎದುರಿನ ಪಾರಂಪರಿಕ ಭವನ, ಶ್ರೀಶಂಕರ ಅದ್ವೈತ ಶೋಧ ಕೇಂದ್ರ, ನರಸಿಂಹ ವನದ ಪರಿಸರದಲ್ಲಿರುವ ವೇದವ್ಯಾಸ ಮಂದಿರ, ಗೋಶಾಲೆ, ಜಿಂಕೆಗಳ ವನ, ಪುಷ್ಪೋದ್ಯಾನ-ಹೀಗೆ ಒಂದೆರಡಲ್ಲ ಹಲವು ಬಗೆಯ ರಚನಾತ್ಮಕ ಕಾರ್ಯಗಳು ನಡೆದಿವೆ.

(ಮುಂದುವರಿಯುವುದು)



## ಶ್ರೀಶಾರದಾ ದೇವಸ್ಥಾನ

**ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 2. ಫೋನ್ : 2520754**

ಪ್ರಿಯರೇ,

ಸ್ವಸ್ತಿ ಶ್ರೀ ನಂದನ ನಾಮ ಸಂ।ರದ ಮೀನ ಮಾಸ ದಿನ ೨೫ ಸಲುವ ಚೈತ್ರ ಕೃಷ್ಣ ಪಕ್ಷ ತಾ.08-04-2012ನೇ ಆದಿತ್ಯವಾರ ಸಂಜೆ ಗಂಟೆ 5-00ರಿಂದ **ಪ್ರತಿವರ್ಷದಂತೆ ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ**

**ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು**

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಶ್ರೀಶಾರದಾ ಮಂಟಪದ ಮೆನೇಜರ್‌ರವರಲ್ಲಿ ರೂ.125/-ನ್ನು ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಪೂಜೆಗೆ ಬರುವಾಗ ಹರಿವಾಣ, ಉದ್ಧರಣೆ ತರಬೇಕಾಗಿ ವಿನಂತಿ.

ಅಪರಾಹ್ನ 3 ರಿಂದ : ದೀಪವಿಟ್ಟು ಮಂಡಲ ರಚನೆ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತೀ ಪಾರಾಯಣ. ಸಂಜೆ 5 ರಿಂದ : ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ, ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ.

**- ಆಡಳಿತ ಮಂಡಳಿ**

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಹಾಗಾದರೆ ಈ ಅಹಿಕ್ಷೇತ್ರ ಬ್ರಾಹ್ಮಣರ ಕುಲಗಳ ಮೂಲ ಯಾ ಮರ್ಮವೇನು ಎಂಬ ಕೌತುಕದ ಪ್ರಶ್ನೆಯೇಳುತ್ತದೆ. ಅದನ್ನು ಹೀಗೆ ಬಗೆ ಹರಿಸಬಹುದು. (ಕುಲಗಳ ಸಂಖ್ಯೆ 256 ಎಂಬುದಾಗಿಯೂ, 279 ಎಂಬುದಾಗಿಯೂ, 326 ಎಂಬುದಾಗಿಯೂ ನಾನಾ ವಿಧವಿದೆ. ಇದರಲ್ಲಿ ನಿಶ್ಚಯ ಸಂಖ್ಯೆಯನ್ನು ಕೊಡುವುದು ಕಷ್ಟ.

ಈ ಬ್ರಾಹ್ಮಣರ ಕುಲನಾಮಗಳನ್ನಾಗಲೀ ಕುಲಗಳನ್ನಾಗಲೀ ಮಯೂರವರ್ಮನು ನಿರ್ಮಿಸಿದುದಲ್ಲ. ಈ ಬ್ರಾಹ್ಮಣರನ್ನು ಮಯೂರವರ್ಮ ಲೋಕಾದಿತ್ಯನು ಕರೆತರಿಸಿದುದೂ ಅಲ್ಲ. (ಆದರೆ ಬ್ರಾಹ್ಮಣರ ಕಡೆಗೆ ಆತನಿಗೆ ಒಲವಿದ್ದಿರಬಹುದು.) ಅವರಾಗಿಯೇ ಕ್ರಿ.ಶ.11ನೇ ಶತಮಾನದ ಸುಮಾರಿಗೆ ತುಳವಕ್ಕೆ ಮೈಸೂರು ರಾಜ್ಯದಿಂದ ಬಂದಿರುವ ಸಂಗತಿಯನ್ನೂ ಆಸಂದರ್ಭಗಳನ್ನೂ ಈ ಮೊದಲೇ ನಿಷ್ಕರ್ಷೆ ಮಾಡಿದ್ದೇನೆ. ಅವರು ತುಳುನಾಡಿಗೆ ಬಂದು ಇಲ್ಲಿಯ ಅರಸರಾದ ಆಳುಪರ ಸಹಾಯದಿಂದ, ಸಹಕಾರದಿಂದ ಬೇರೆ ಬೇರೆ ಕಡೆ ನೆಲೆನಿಂತ ನಂತರ ತಮಗೆ ನಾಮಕರಣ ಮಾಡಿಕೊಂಡರು. ಈ ಹೆಸರುಗಳನ್ನು ನಾಡಿನ ಗ್ರಾಮಗಳು ಯಾ ಸ್ಥಳಗಳು – ಯಾ – ಸಜೀವ ಯಾ ನಿರ್ಜೀವ ವಸ್ತುಗಳು ಯಾ ಸ್ಥಾವರ, ಜಂಗಮಗಳು – ಇವುಗಳನ್ನಾಧರಿಸಿಕೊಂಡು ಇಟ್ಟುಕೊಂಡಂತೆ ಕಂಡುಬರುತ್ತದೆ. ಈ ಸಂಗತಿಯು ಸ್ಪಷ್ಟವೂ ಇದೆ. ಈ ರೀತಿ ಹೆಸರಿಡುವ ಕ್ರಮ ಅರ್ವಾಚೀನವೆಂದೇ ಹೇಳಬೇಕು. ಅಹಿಕ್ಷೇತ್ರದಲ್ಲಿ ಬ್ರಾಹ್ಮಣರ ನಾಮಧೇಯವು ನಮ್ಮಲ್ಲಿದ್ದಂತೆ ಕಂಡುಬರುವುದಿಲ್ಲವೆಂಬುದನ್ನು ತಿಳಿಯಲು ಹೆಚ್ಚು ದೂರ ಹೋಗಬೇಕಾಗಿಲ್ಲ. ಈ ಅಹಿಚ್ಛತ್ರ ಬ್ರಾಹ್ಮಣರ ಕುಲಗಳನ್ನು ಕೆಳಗಿನಂತೆ ವರ್ಗೀಕರಿಸಬಹುದು. (ದೃಷ್ಟಾಂತಗಳನ್ನು ಕೊಡುವಾಗ ಕೆಲವನ್ನು ಮಾತ್ರ ಕೊಟ್ಟಿದ್ದೇನೆ. ಈ ಕುಲನಾಮಗಳ ಸಂಪೂರ್ಣ ಯಾದಿಯನ್ನು 'ಕುಲನಾಮಗಳು ಹೇಳುವ ತುಳುನಾಡಿನ ಕತೆ' ಎಂಬ ಮುಂದಿನ ಲೇಖದಲ್ಲಿತ್ತಿದ್ದೇನೆ.)

**1) ಪ್ರತ್ಯಯಗಳ ಆಧಾರದ ಮೇಲೆ ಹೊಂದಿಕೊಂಡು :** ಅ) 'ತಾಯ' ಪ್ರತ್ಯಯದಿಂದ ಅಂತ್ಯವಾಗುವ ಹೆಸರು : ಖಡ್ಗತ್ತಾಯ, ನಾರಿತಾಯ, ಅಮೆತ್ತಾಯ, ಅನಂತೋಡಿತ್ತಾಯ, ನೂಜಿತ್ತಾಯ, ಪೆಲತ್ತಾಯ, ಪಿಜತ್ತಾಯ, ಉಲಪಡಿತ್ತಾಯ, ಬಜತ್ತಾಯ, ಶಿವತ್ತಾಯ ಇತ್ಯಾದಿ.

ಆ) 'ನಾಯ' ಪ್ರತ್ಯಯದಿಂದ ಅಂತ್ಯವಾಗುವ ಹೆಸರುಗಳು : ಎಡಬೆಟ್ಟುನಾಯ, ಉಪರಂಣಾಯ, ಬೆಲ್ಲಂಣಾಯ, ಕೋಡಿನ್ನಾಯ, ಮಡುಮಂಣಾಯ, ಕೊಟ್ಟಲಾಡಿನ್ನಾಯ, ಮಲ್ಲಂಜಿನಾಯ, ಕೇಕುಂಣಾಯ, ಇತ್ಯಾದಿ.

ಇ) 'ಆಯ' ಪ್ರತ್ಯಯದಿಂದ ಅಂತ್ಯವಾಗುವ ಹೆಸರುಗಳು : ನಿಂಜೂರಾಯ, ಬೆಳ್ಳಾರಾಯ, ಶಿಬರೂರಾಯ, ಶಿಮಂತೂರಾಯ, ನೂವತ್ತೂರಾಯ, ಮುನ್ನೂರಾಯ, ಅಡರಾಯ, ಪಾಂತುರಾಯ, ಚಿಕ್ಕರಾಯ, ಕುದುರಾಯ, ಪಾತುತ್ತರಾಯ ಇತ್ಯಾದಿ.

ಈ) 'ಲಾಯ' ಪ್ರತ್ಯಯದಿಂದ ಅಂತ್ಯವಾಗುವ ಹೆಸರುಗಳು : ಕುಕ್ಕಿಲಾಯ, ಪಡಿಲಾಯ, ನಡುವಂತಿಲ್ಲಾಯ, ಮುಡಿಕುಡಲಾಯ, ಕೆದಿಲಾಯ, ಮಜಿಲಾಯ, ತುಂಬಿಕಲಾಯ, ತೋಡಿಲ್ಲಾಯ, ತೆಂಕಿಲ್ಲಾಯ, ಮಿತ್ತಿಲ್ಲಾಯ ಇತ್ಯಾದಿ.

ಉ) 'ಪಳ್ಳಿ'ಯಿಂದ ಅಂತ್ಯವಾಗುವ ಹೆಸರುಗಳು : ಉಗ್ರಪಳ್ಳಿ, ಉಂಗೂರ ಪಳ್ಳಿ, ಓರಂಬಳ್ಳಿ, ಕೈರಂಬಳ್ಳಿ.

ಊ) ಪ್ರತ್ಯಯಗಳಿಲ್ಲದ ಇತರ ಹೆಸರುಗಳು : ಉಡುಪ, ಹಂದೆ, ಬಾಸುರಿ, ತುಂಗ, ನಾವಡ, ಹೊಳ್ಳ, ಕಾರಂತ, ಮಯ್ಯ, ಹೆಬ್ಬಾರ, ಅಂಣಪಿ, ಗೂಡೆ, ದೋಣಿ, ನೂಜಿ, ಆನೆ, ಅಗಳಿ, ಮುಕ್ಕೆ, ಅಮ್ಮಣಿ, ಕಲಂಬಿ, ಕೋಣೆ, ದುರ್ಗೆ, ಪಾಡಿ ಇತ್ಯಾದಿ.

**2) ಊರುಗಳ ಹೆಸರುಗಳನ್ನು ಹೊಂದಿಕೊಂಡು :** ಕೊಡಿಪಾಡಿ, ಪಾರ್ಕಾಳ, ಅಂತಿಲ, ಕಕ್ಕೋಡಿ, ಕೊಳಕೆ, ಕುಕ್ಕಿಲ, ಪಾನಂಜೆ, ನಿಂಜೂರು, ಬೆಳ್ಳಾರೆ, ಕರಕಡ, ಮಂಗಲ, ನಯಂಪಳ್ಳಿ, ಬನ್ನಿಂಜೆ, ಕೊಡಂಬಳ್ಳಿ, ಮೂಡ, ಕಾಚೋಳಾಡಿ, ಕಲ್ಯಾಣ, ಆರಿತೋಡು, ಉಚ್ಚಿಲ, ಮಲ್ಲಂಜಿ, ಕಡಂಬಳ್ಳಿ, ಸಗ್ರಿ, ಮಡವಳ್ಳಿ, ಮರಡಿ, ಪಾಡಿ, ಕೇಳ – ಇತ್ಯಾದಿ ಸ್ಥಳಗಳಲ್ಲಿ ವಾಸಿಸುವವರು ಎಂಬರ್ಥದಲ್ಲಿಯೂ ಆ ಊರುಗಳಿಗೆ ಸೇರಿದವರು ಎಂಬ ಅರ್ಥದಲ್ಲಿಯೂ 'ತಾಯ' ಪ್ರತ್ಯಯ ಸೇರಿ ಕುಲನಾಮಗಳಾದುವು. ಕೊಡಪಾಡಿತ್ತಾಯ, ಪಾರ್ಕಾಳತ್ತಾಯ, ಅಂತಿಲತ್ತಾಯ, ಕಕ್ಕೋಡಿತ್ತಾಯ, ಕೊಳಕೆತ್ತಾಯ, ಕುಕ್ಕಿಲತ್ತಾಯ, ಪಾನಂಜೆತ್ತಾಯ, ನಿಂಜೂರುತ್ತಾಯ, ಬೆಳ್ಳಾರತ್ತಾಯ, ಕರಡಕ (ಕರ್ಕಾಟ)ತ್ತಾಯ, ಮಂಗಲತ್ತಾಯ, ನಯಂಪಳ್ಳಿತ್ತಾಯ, ಬನ್ನಿಂಜತ್ತಾಯ, ಕೊಡಂಬಳ್ಳಿತ್ತಾಯ, ಮೂಡತ್ತಾಯ, ಕಾಚೋಳಾಡಿತ್ತಾಯ, ಕಲ್ಯಾಣಂತಾಯ, ಆರಿತೋಡುತ್ತಾಯ, ಉಚ್ಚಿಲತ್ತಾಯ, ಮಲ್ಲಂಜಿತ್ತಾಯ, ಕಡಂಬಳ್ಳಿತ್ತಾಯ, ಸಗ್ರಿತ್ತಾಯ, ಮಡವಳ್ಳಿತ್ತಾಯ, ಮರಡಿತ್ತಾಯ, ಪಾಡಿತ್ತಾಯ, ಮೂಡುತ್ತಾಯ, ಕೇಳತ್ತಾಯ, ಇತ್ಯಾದಿ.


ಅಂತೆಯೇ ಊರ ಹೆಸರುಗಳಿಗೆ 'ಅಲ್ಲಿಯವನು' ಎಂಬರ್ಥದಲ್ಲಿ 'ಆಯ' ಪ್ರತ್ಯಯ ಸೇರಿ ಕುಲಗಳ ಹೆಸರಾದಂತೆ ಕಂಡುಬರುತ್ತದೆ.

ಶಿಬರೂರು + ಆಯ – ಶಿಬರೂರಾಯ
ಶೀಮಂತೂರು + ಆಯ – ಶಿಮಂತೂರಾಯ
ಮುನ್ನೂರು + ಆಯ – ಮುನ್ನೂರಾಯ
ನಿಂಜೂರು + ಆಯ – ನಿಂಜೂರಾಯ
ಚಕ್ಕರ + ಆಯ – ಚಕ್ಕರಾಯ
ಅಲೆವೂರು+ಆಯ–ಅಲೆವೂರಾಯ ಇತ್ಯಾದಿ.

(ಮುಂದುವರಿಯುವುದು)

'ತುಳುನಾಡಿನಲ್ಲಿ ಬ್ರಾಹ್ಮಣ್ಯ' ಈ ಪುಸ್ತಕ ಇಲ್ಲಿ ಲಭ್ಯ :
ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), #10-2-87B1, ಮೊದಲನೆಯ ಮಹಡಿ, ಎಸ್.ಎಮ್.ಎಸ್.ಪಿ. ಸಂಕೀರ್ಣ, ಸಂಸ್ಕೃತ ಕಾಲೇಜ್ ಬಳಿ, ಉಡುಪಿ-576101, ಕರ್ನಾಟಕ

# ಕನ್ನಡ ಕವಿಕಾವ್ಯ ಪರಿಚಯ-೩ : ವರಕವಿ ಮುದ್ದಣ



– ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಜನವರಿ ಸಂಚಿಕೆಯಿಂದ ಮುಂದುವರಿದುದು)

ನಂದಳಿಕೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಲಕ್ಷ್ಮೀನಾರಾಯಣನು ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಉಡುಪಿಗೆ ಹೋಗಿ ಸೇರಿಕೊಂಡನು. ಆದರೆ ಮನೆಯ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದ ದೆಸೆಯಿಂದಾಗಿ ಒಂದೆರಡು ವರ್ಷಗಳಲ್ಲೇ ಹೈಸ್ಕೂಲು ಶಿಕ್ಷಣಕ್ಕೆ ತಿಲಾಂಜಲಿಯಿತ್ತು ಕನ್ನಡದಲ್ಲಿ ಶಿಕ್ಷಣ ನೀಡುತ್ತಿರುವ ಶಿಕ್ಷಕ ತರಬೇತಿ ಶಾಲೆಗೆ ಸೇರಿಕೊಂಡನು. ಇಂಗ್ಲೀಷ್ ಭಾಷೆಯ ಅಲ್ಪಸ್ವಲ್ಪ ಜ್ಞಾನದಿಂದ ಖಾಸಗಿ ಓದಿನಿಂದ ಇಂಗ್ಲೀಷ್ ಭಾಷೆಯನ್ನೂ, ಕನ್ನಡದಲ್ಲಿ ಶಿಕ್ಷಕ ತರಬೇತಿಯನ್ನೂ ಮುಂದುವರಿಸಿದನು. ಈ ಅವಧಿಯಲ್ಲಿ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳನ್ನು ನೋಡುವ, ಯಕ್ಷಗಾನ ಪದಗಳನ್ನು ಕೇಳುವ ಅವಕಾಶಗಳು ಕವಿಗೆ ಅನಾಯಾಸವಾಗಿ ದೊರೆತುದರಿಂದ ಯಕ್ಷಗಾನದಲ್ಲಿ ತನ್ನ ಅನುಭವವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ರಾಗ, ತಾಳ, ಲಯ ಬದ್ಧವಾದ ಪದಗಳನ್ನು ರಚಿಸುವ ಚಾಕಚಕ್ಯತೆಯನ್ನು ಬೆಳೆಸಿಕೊಂಡನು. ಇಷ್ಟಾಗುವಾಗ ಈತನ ದೇಹದಾರ್ಢ್ಯತೆಯನ್ನು, ಆಟೋಟಗಳಲ್ಲಿ ಇವನಿಗಿರುವ ಆಸಕ್ತಿಯನ್ನೂ ಅರಿತ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯರು ದೈಹಿಕ ಶಿಕ್ಷಣ ನೀಡುವ ಶಿಕ್ಷಕ ತರಬೇತಿಗೆ ಇವನನ್ನು ಶಿಫಾರಸು ಮಾಡಿ, ಸರಕಾರದ ಖರ್ಚಿನಲ್ಲಿ ಕಲಿಯುವ ವ್ಯವಸ್ಥೆಯಲ್ಲಿ ಇವನನ್ನು ಮದರಾಸಿಗೆ ಕಳುಹಿಸಿದರು. ಮದರಾಸಿನಲ್ಲಿ ತರಬೇತಿಯ ಅವಧಿಯು ಅಲ್ಪವಾಗಿದ್ದರೂ ಕನ್ನಡವನ್ನುಳಿದು ಇತರ ದ್ರಾವಿಡ ಭಾಷೆಗಳಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದ ಲಕ್ಷ್ಮೀನಾರಾಯಣನು ತಮಿಳು, ತೆಲುಗು, ಮಲಯಾಳಿ ಭಾಷೆಗಳನ್ನೂ ಸಹಾ ಕಲಿತು ತರಬೇತಿ ಮುಗಿಸಿ ಮರಳಿದನು. ಉಡುಪಿಯ ಬೋರ್ಡು ಹೈಸ್ಕೂಲಿನಲ್ಲಿ ಮಾಹೆಯಾನ ರೂಪಾಯಿ ಹತ್ತರ ಪಗಾರದ ವ್ಯಾಯಾಮ ಶಿಕ್ಷಕನ ಕೆಲಸ ಈತನಿಗೆ ದೊರೆಯಿತು. 1889ನೆಯ ಇಸವಿ ಮೇ ತಿಂಗಳಿನಲ್ಲಿ ಈತನು ಅಂಗಸಾಧನೆಯ ಶಿಕ್ಷಕನಾಗಿ ಉಡುಪಿಯಲ್ಲಿ ವೃತ್ತಿಗೆ ಸೇರಿದನೆಂದು ಶ್ರೀ ಮಂಜೇಶ್ವರ ಗೋವಿಂದ ಪೈಗಳು ಹೇಳುತ್ತಾರೆ. ಈ ಅವಧಿಯಲ್ಲಿ ಉಡುಪಿ ಹೈಸ್ಕೂಲಿನಲ್ಲಿಯೇ ಅಧ್ಯಾಪಕರಾಗಿದ್ದ ಮಳಲಿ ಸುಬ್ಬರಾಯರ ಸಾಂಗತ್ಯವು ಲಕ್ಷ್ಮೀನಾರಾಯಣನಿಗಾಯಿತು. ಅವರು ಉತ್ತಮ ಅಧ್ಯಾಪಕರಾಗಿದ್ದಂತೆಯೇ ನಾಟಕಕಾರರೂ, ಸ್ವತಹ ಪ್ರಸಿದ್ಧ ನಟರೂ, ಯಕ್ಷಗಾನ ಕೃತಿಗಾರರೂ ಆಗಿದ್ದರು. ಅವರನ್ನೇ ತನ್ನ ಗುರುವಾಗಿಸಿಕೊಂಡು ಲಕ್ಷ್ಮೀನಾರಾಯಣನು ಅವರ ಕೆಲವು ಯಕ್ಷಗಾನ ಪ್ರಸಂಗಗಳನ್ನೂ, ಮರಾಠಿ ನಾಟಕಗಳನ್ನೂ, ಅವರ ಸಂಗ್ರಹದಲ್ಲಿರುವ ಇತರ ಎಷ್ಟೋ ಅಮೂಲ್ಯ ಪುಸ್ತಕಗಳನ್ನೂ ಓದಿ ತನ್ನ ಜ್ಞಾನವನ್ನು ವೃದ್ಧಿಸಿಕೊಂಡನು. ವೀರಮಣಿ ಕಾಳಗ, ಕಚೋಪಾಖ್ಯಾನ, ದೇವಯಾನಿ ಸ್ವಯಂವರ, ಶಕುಂತಲಾ ಸ್ವಯಂವರ ಮೊದಲಾದ ಯಕ್ಷಗಾನ ಕೃತಿಗಳನ್ನು ಓದಿ, ತನಗೂ ಯಕ್ಷಗಾನ ಕೃತಿಗಳನ್ನು ರಚಿಸುವ ಆಸಕ್ತಿಯಿರುವುದಾಗಿಯೂ, ಪ್ರಚಾರದಲ್ಲಿಲ್ಲದ ಹೊಸ ಕಥಾನಕಗಳಿದ್ದರೆ ಸೂಚಿಸಬೇಕೆಂದೂ ಈತನು ಸುಬ್ಬರಾಯರಲ್ಲಿ ಕೇಳಿಕೊಂಡನು. ಶಿಷ್ಯನ ಉತ್ಸಾಹಭರಿತವಾದ ಈ ಕೇಳಿಕೆಯನ್ನು ಮನ್ನಿಸಿದ ಗುರುಗಳು ಸಂಸ್ಕೃತದಲ್ಲಿ ಪ್ರಚಲಿತವಿರುವ ರತ್ನಾವಳೀ ನಾಟಕದ ಕಥಾನಕವನ್ನು ಹೇಳಿ ಇವನಿಂದ ಬರೆಯಿಸಿದರು. ಗುರು ಮುಖೇನ ಕೇಳಿದ ಈ ಕಥೆಯನ್ನು 'ರತ್ನಾವತೀ ಕಲ್ಯಾಣ'ವೆಂಬ ಹೆಸರಿನ ಯಕ್ಷಗಾನ ಪ್ರಸಂಗವನ್ನು ರಚಿಸಿದನು. ಇತರ ಪ್ರಸಂಗಗಳ ರಾಗ, ತಾಳ, ಧಾಟಿಗಳನ್ನನುಸರಿಸಿ, ಮಟ್ಟುಗಳನ್ನು ಬರೆದನು. ನಾಂದೀ ಶ್ಲೋಕಗಳನ್ನು ಗುರುಗಳೇ ರಚಿಸಿ ಕೊಟ್ಟರು. ಗುರುಗಳ ಸಹಕಾರದಿಂದ ತನ್ನ ಮೊತ್ತ ಮೊದಲ ಕೃತಿಯನ್ನು ರಚಿಸಿ ಲಕ್ಷ್ಮೀನಾರಾಯಣನು 'ಕವಿ'ಯೆನಿಸಿದನು. ಪ್ರಾಸಾನು ಪ್ರಾಸಗಳ, ಅರ್ಥಾಲಂಕಾರ–ಶಬ್ದಾಲಂಕಾರಗಳ ವೈಭವವನ್ನು ನಾವು ಈ ಕೃತಿಯಲ್ಲಿ ಕಾಣಬಹುದು. ಉದಾಹರಣೆಗೆ :-

''ಏನನುಸಿರಲಿ ಮಾನಿನಿಯ ಚೆಲು। ವಾನನದ ಪರಿಗೆ । ಮದಗಜ । ಯಾನೆ ಕೋಕಿಲಗಾನೆ ಪತಿಯಾನೂನ ಮೊಗಸಿರಿಗೆ। ನಿಚಿಲದಿ। ಸಾನುರಾಗದೋಳ್ ತಾನೆ ಮರೆಯುತ । ಪೂರ್ಣ ಕಳೆಯೆಸಗೆ। ಇದಕನು। ಮಾನವಿಲ್ಲವಿದೇನೆನಲುಹಗೆ। ಮಾನವಗೆ ತಾವ್ । ಬೇನೆ ಪಡುವಂತೀ ನಳಿನಗಳು ನ್ಯೂನಗೊಂಡಿವೇ । ಹೀನಿಸುತಲಾ ಏಣಧರನನು ।''

ಒಂದು ಗ್ರಂಥವನ್ನು ಬರೆದ ಉತ್ಸಾಹದಿಂದಲೇ ಇನ್ನೊಂದನ್ನು ಬರೆಯಲು ಆರಂಭಿಸಿದನು. ಸ್ಕಂದ ಪುರಾಣದೊಳಗಿನ ಷಣ್ಮುಖ ಚರಿತ್ರೆಯನ್ನು 'ಕುಮಾರ ವಿಜಯ' ಎಂಬ ಹೆಸರಿನ ಯಕ್ಷಗಾನ ಪ್ರಸಂಗವನ್ನಾಗಿ ಬರೆಯಲು ತೊಡಗಿದನು. ಈ ವೇಳೆಗೆ ತರುಣ ಕವಿಯ ಬರವಣಿಯನ್ನು ಅನುಸರಿಸುತ್ತಿದ್ದಕ್ಕೆ ಪಳಗಿದಂತೆ ಬುದ್ಧಿಯೂ ಹೆಚ್ಚಿನ ಓದಿನಿಂದಾಗಿ ಪಕ್ವತೆಯ ಕಡೆಗೆ ವಾಲುತ್ತಿತ್ತು. ಶಬ್ದಜ್ಞಾನವು ಹೆಚ್ಚಿ ಕನ್ನಡ ನಾಟಕಗಳಲ್ಲಿ ಬರುವ ಹಾಡುಗಳನ್ನು ಪದ್ಯಗಳ ಹೊಸ ಧಾಟಿಗಳನ್ನೂ ಅಭ್ಯಾಸ ಮಾಡುತ್ತಿದ್ದುದರಿಂದ ಕವಿಯ ಸಂಗೀತ ಜ್ಞಾನವು ವೃದ್ಧಿಯಾಗಿ ಪಿಟೀಲು ನುಡಿಸುವುದನ್ನೂ ಅಭ್ಯಾಸ ಮಾಡಲು ತೊಡಗಿದನು. ಹೀಗೆ ಸಾರಸ್ವತಾಮೃತದ ಎರಡು ನದಿಗಳಾದ ಸಾಹಿತ್ಯ ಮತ್ತು ಸಂಗೀತಗಳೆರಡರಲ್ಲಿಯೂ ಮಿಂದು ಬಂದ ಕವಿ ರಚಿಸಿದ ಈ ಎರಡನೆಯ ಕೃತಿ ಮೊದಲ ಕೃತಿಗಿಂತ ಎಷ್ಟೋ ಮೇಲಾಯಿತು. ತನ್ನ ಮೊದಲನೆಯ ಕೃತಿಯನ್ನು (ರತ್ನಾವತೀ ಕಲ್ಯಾಣ) ತಾನು ಓದಿದ ಪ್ರಾಥಮಿಕ ಶಾಲೆಯ ಸಂಸ್ಥಾಪಕರಾದ ಶ್ರೀ ಮೂರೂರು ಚರಡಪ್ಪಯ್ಯನವರಿಗೆ ಅರ್ಪಿಸಿದನು. ಈ ಎರಡನೆಯ ಕೃತಿಯನ್ನು ಗುರುಗಳಾದ ಮಳಲಿ ಸುಬ್ಬರಾಯರಿಗೆ ಅರ್ಪಿಸಿದನು. ಇದನ್ನು ಕವಿ–


*''ಸರ್ಪ ಭೂಷಣ ಭಕ್ತ ಕವಿತಾ ।*
*ದರ್ಪಣಾದಿ ಗಭೀರ ಗುರುವೆನಿ–।*
*ಸಿರ್ಪ ಮಳಲೀ ಸುಬ್ಬರಾಯರಿಗರ್ಪಿಸಿದೆನು ॥ (ತ್ರಿವ್ರಡೆತಾಳ)*

ಎಂದು 'ಕುಮಾರ ವಿಜಯ'ದಲ್ಲಿ ಹೇಳಿಕೊಂಡಿರುವನು.

ಪಂಡಿತ ಜನಪ್ರಿಯವಾದ ಶಬ್ದಾಲಂಕಾರ, ಪ್ರಾಸ ಚಮತ್ಕಾರ, ಕಾವ್ಯಮಯವಾದ ಪ್ರೌಢ ಶೈಲಿ ಇತ್ಯಾದಿಗಳಿಂದಲೂ, ಹಳೆಗನ್ನಡದ ವ್ಯಾಕರಣ ನಿಯಮಗಳನ್ನೊಳಗೊಂಡ ಶುದ್ಧವಾದ ಪ್ರಯೋಗಗಳಿಂದಲೂ, ಪ್ರಾಚೀನ ಕಾವ್ಯ ಸಮುದಾಯದಲ್ಲಿ ಮಾತ್ರವೇ ದೊರೆಯಬಹುದಾದ ಅಪೂರ್ವವಾದ ಪದಸಮೂಹಗಳಿಂದಲೂ, ಹೊಸಹೊಸದಾಗಿ ಜೋಡಿಸಿದ ಬಗೆಬಗೆಯ ಮಟ್ಟುಗಳಿಂದಲೂ 'ಕುಮಾರ ವಿಜಯ'ವು ಉತ್ತಮವಾದ ಯಕ್ಷಗಾನ ಗ್ರಂಥವಾಗಿ ಹೊರಹೊಮ್ಮಿತು. ಉಡುಪಿಯಲ್ಲಿಯೇ ಇವೆರಡೂ ಮುದ್ರಣಗೊಂಡುವು. 'ಕುಮಾರ ವಿಜಯ' ಪ್ರಕಟವಾದ ಆರಂಭದಲ್ಲಿ ಪೂಜ್ಯ ಪಂಜೆ ಮಂಗೇಶರಾಯರು ಇದನ್ನು ಓದಿ ಬೆರಗಾಗಿ 'ಕುಮಾರ ವಿಜಯ' ಬಿಟ್ಟರೆ ಪ್ರಸಂಗವಿಲ್ಲ, ನಂದಳಿಕೆಯವರನ್ನು ಬಿಟ್ಟರೆ ಕವಿಯಿಲ್ಲ ಎಂದರಂತೆ! 1895ರಲ್ಲಿ ನೆರೆದ ಸಭೆಯೊಂದರಲ್ಲಿ ಬಹಿರಂಗವಾಗಿ ಪಂಜೆಯವರು ಇದನ್ನು ಪ್ರಶಂಸಿಸಿದ್ದೂ ಆಯಿತು. ಆದರೇನು? 'ರತ್ನಾವತೀ ಕಲ್ಯಾಣ'ಕ್ಕೆ ಒಂದೆರಡು ಬಾರಿಯಾದರೂ ರಂಗದ ಮುಖ ಕಾಣುವ ಸುಯೋಗ ದೊರೆತಿದ್ದರೆ 'ಕುಮಾರ ವಿಜಯ'ಕ್ಕೆ ಅದೂ ಲಭಿಸದೇ ಹೋಯಿತು. ಈ ಪ್ರಸಂಗವು ಇಂದಿಗೂ 'ಗುಪ್ತ ನಿಧಿ'ಯಾಗಿಯೇ ಉಳಿದಿದೆ!

(ಮುಂದುವರಿಯುವುದು)

Krishna Rao
Ph :2520652
Mob. :9902029048
KISHAN
Studio & Video


Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.



RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
QUALITY FIRST AND ALWAYS

# ಮೆನೇಜ್‌ಮೆಂಟ್ ಗುರುವಾಗಿ 'ಆದಿ ಶಂಕರಾಚಾರ್ಯರು'



-ಸಿ.ಎಸ್.ರಾವ್
ವಿಶ್ರಾಂತ ಡಿ.ಜಿ.ಎಮ್.,
ಕಾರ್ಪೋರೇಶನ್ ಬ್ಯಾಂಕ್

ಆದಿ ಶಂಕರಾಚಾರ್ಯರೆಂದರೆ ನಮಗೆಲ್ಲಾ ನೆನಪಾಗುವುದು ಅವರ ಅದ್ವೈತ ಸಿದ್ಧಾಂತ, ಅವರ ಚರಿತ್ರೆ ಮತ್ತು ಅವರು ಸ್ಥಾಪಿಸಿದ ಶೃಂಗೇರಿಯ ದಕ್ಷಿಣಾಮ್ನಾಯ ಪೀಠ ಸೇರಿ ನಾಲ್ಕು ಅಮ್ನಾಯ ಪೀಠಗಳು. ಅವರು ಭೋದಿಸಿದ ಅದ್ವೈತ ಸಿದ್ಧಾಂತ ಆಧ್ಯಾತ್ಮಿಕ ಲೋಕದಲ್ಲಿ ಒಂದು ಅದ್ಭುತವಾದ ತತ್ವ ಸಿದ್ಧಾಂತ. ಇದನ್ನು ಒಂದು ವೈಜ್ಞಾನಿಕ ಸಿದ್ಧಾಂತ ಎಂದು ಹೇಳಿದವರು ನಮ್ಮ ದೇಶದ ಶ್ರೇಷ್ಠ ತತ್ವಜ್ಞಾನಿ ಮತ್ತು ನಮ್ಮ ರಾಷ್ಟ್ರಾಧ್ಯಕ್ಷರಾಗಿದ್ದ ಡಾ| ಎಸ್.ರಾಧಾಕೃಷ್ಣನ್‌ರವರು. ಅದನ್ನೇ ಇತ್ತೀಚೆಗೆ ಡಾ| ಬಿ.ಎಂ.ಹೆಗ್ಡೆಯವರು ಶಂಕರಾಚಾರ್ಯರ ಬಗ್ಗೆ ಮಾತನಾಡುವಾಗ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇನ್ನು ಅವರ ಚರಿತ್ರೆಯ ಬಗ್ಗೆ ಶೃಂಗೇರಿ ಮಠದ ಶಿಷ್ಯರಾದ ನಾವು ಪ್ರತೀ ವರ್ಷ 'ಶಂಕರ ಜಯಂತಿ'ಯನ್ನು ಆಚರಿಸುವಾಗ ಪ್ರತಿಯೊಬ್ಬ ಭಾಷಣಗಾರರಿಂದ ಅವರ ಬಾಲ್ಯ, ವಿದ್ಯಾಭ್ಯಾಸ, ಬೋಧನೆಯ ಬಗ್ಗೆ ಕೇಳಿ ತಿಳಿಯುತ್ತೇವೆ.

ನನಗೆ ಅವರ ಚರಿತ್ರೆ ಓದಿದಾಗಲೆಲ್ಲ ಅವರು ಒಬ್ಬ ಶ್ರೇಷ್ಠ ತತ್ವಜ್ಞಾನಿ ಮಾತ್ರವಲ್ಲದೆ ಅವರು ಒಬ್ಬ ಶ್ರೇಷ್ಠ ಮೆನೇಜ್‌ಮೆಂಟ್‌ಗುರುವಾಗಿ ಕಾಣಿಸುತ್ತಾರೆ. (ಯಾವುದೇ ಸಮಸ್ಯೆಯನ್ನು ವಿಶ್ಲೇಷಿಸಿ ಸರಿಯಾದ ಪರಿಹಾರ ನೀಡಲು ಸಮರ್ಥವಾದವರು.) ಇದನ್ನು ಅರ್ಥಮಾಡಿಕೊಳ್ಳಲು ಅವರ ಚರಿತ್ರೆಯ ಕೆಲವು ತುಣುಕುಗಳನ್ನು ವಿವರವಾಗಿ ಅರ್ಥೈಸಬೇಕಾಗುತ್ತದೆ.

ಅವರ ಜನನಕಾಲದಲ್ಲಿದ್ದ ಹಿಂದೂ ಧರ್ಮದ ಅವಸಾನದ ಸ್ಥಿತಿಯನ್ನು ವಿಮರ್ಶಿಸಿ ಅದಕ್ಕೊಂದು ಅರ್ಥಪೂರ್ಣವಾದ, ವೈಜ್ಞಾನಿಕವಾದ, ಹೊಸ ವ್ಯವಸ್ಥೆಯನ್ನು ನಿರ್ಮಿಸಿದರು. ಅಖಂಡ ಭಾರತದ ಕಲ್ಪನೆಯನ್ನು ಜನರಿಗೆ ತಿಳಿಸಿ ಅದರ ಐಕ್ಯತೆಗಾಗಿ ಕ್ರಮ ತೆಗೆದುಕೊಂಡರು. (ಕಾಶ್ಮೀರ ಯಾವತ್ತೂ ಭಾರತದ ಭಾಗವಾಗಿರಲಿಲ್ಲ ಎನ್ನುವ ಆರುಂಧತಿರಾಯ್ ಮತ್ತು ಅವರ ಬಳಗದವರು ಶಂಕರಾಚಾರ್ಯರ ಚರಿತ್ರೆಯನ್ನು ಒಂದು ಬಾರಿ ಓದುವುದು ಒಳ್ಳೆಯದು). ಬೇರೆ ಬೇರೆ ಆಚಾರ್ಯರು ಆ ದೇವರು ಶ್ರೇಷ್ಠ/ಮೇಲೆ, ಈ ದೇವರು ಕನಿಷ್ಠ/ಕೆಳಗೆ ಎನ್ನುತ್ತಿರುವಾಗ ಯಾವುದೇ ಇಷ್ಟವಾದ ಹೆಸರಿನಲ್ಲಿ ದೇವರನ್ನು ಕರೆಯಿರಿ, ಪೂಜಿಸಿರಿ, ಆದರೆ ದೇವರು ಒಬ್ಬನೇ ಎಂಬ ವೇದವಾಕ್ಯವನ್ನು ಉದಾಹರಿಸಿ ತೋರಿಸಿದವರು ಮತ್ತು ಆತ್ಮಜ್ಞಾನವನ್ನು ಅರ್ಥೈಸಿ ಬೋಧಿಸಿದವರು ಪರಮ-ಆತ್ಮ-ಶ್ರೀಶಂಕರಾಚಾರ್ಯರು.

**1. ವಿದ್ಯಾಭ್ಯಾಸ :** ಶಂಕರಾಚಾರ್ಯರ ಜನನ ಈಗಿನ ಕೇರಳ ರಾಜ್ಯದ ಕೊಚ್ಚಿನ್ ವಿಮಾನ ನಿಲ್ದಾಣದಿಂದ 10 ಕಿ.ಮೀ. ದೂರದಲ್ಲಿ ಪೂರ್ಣನದಿಯ ದಂಡೆಯಲ್ಲಿರುವ 'ಕಾಲಟಿ' ಎನ್ನುವ ಹಳ್ಳಿ. ಅವರ ಮನೆಯ ಆರಾಧ್ಯ ದೇವರು **ವೇಣುಗೋಪಾಲ.** ಪೂರ್ಣನದಿ, ವೇಣುಗೋಪಾಲ ದೇವಸ್ಥಾನ, ಅವರ ಮನೆ ಇದ್ದ ಜಾಗದಲ್ಲಿ ಕಟ್ಟಿದ ಶ್ರೀಶಂಕರಾಚಾರ್ಯರ ಸ್ಮಾರಕವನ್ನು ಈಗಲೂ ನಾವು ನೋಡಬಹುದು. ಅವರ ಆರಂಭಿಕ ವಿದ್ಯಾಭ್ಯಾಸ ಮನೆಯಲ್ಲಿ ಮತ್ತು ಹತ್ತಿರವಿದ್ದ ಗುರುಕುಲದಲ್ಲಿ ನಡೆಯಿತು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಅವರು ಗುರುವಿನ ಅನ್ವೇಷಣೆಯಲ್ಲಿ ಈಗಿನ ಮಧ್ಯಪ್ರದೇಶದಲ್ಲಿರುವ ನರ್ಮದಾ ನದಿಯ ತಟದಲ್ಲಿದ್ದ ಗೋವಿಂದ ಭಗವತ್ಪಾದರ ಆಶ್ರಮಕ್ಕೆ ಹೋದರು. ಅವರು ಹುಟ್ಟಿದ್ದು ಕೇರಳದಲ್ಲಿಯಾದರೂ ಅವರ ಕಾರ್ಯಕ್ಷೇತ್ರ ಈಗಿನ ಮಧ್ಯಪ್ರದೇಶ, ಉತ್ತರಪ್ರದೇಶ, ಉತ್ತರಖಂಡ, ಕರ್ನಾಟಕ, ಕಾಶ್ಮೀರ, ಒರಿಸ್ಸಾ, ಗುಜರಾತ್ ಆಗಿತ್ತು. ಬಹಳ ಆಶ್ಚರ್ಯವೆಂದರೆ ಆಮೇಲೆ ಬಂದು ಆಚಾರ್ಯರೆಲ್ಲ ಅವರು ಹುಟ್ಟಿದ ಊರು, ರಾಜ್ಯಗಳನ್ನು ಕಾರ್ಯಕ್ಷೇತ್ರವನ್ನಾಗಿಸಿದ್ದರೆ, ಶಂಕರಾಚಾರ್ಯರು ಕಾರ್ಯಕ್ಷೇತ್ರವನ್ನಾಗಿ ಆರಿಸಿದ್ದು ಅಖಂಡ ಭಾರತವನ್ನು. ಅವರಿಗೆ ಬೇರೆ ಬೇರೆ ಪ್ರಾಂತ್ಯದ ಭಾಷೆ, ಸಂಸ್ಕೃತಿ, ಯಾವುದೂ ಅವರು ಆರಿಸಿದ ಕಾರ್ಯಕ್ಕೆ ಅಡಚಣೆ ಆಗಲಿಲ್ಲ, ಅವರು ಆತ್ಮಜ್ಞಾನವನ್ನು ಸಾಕ್ಷಾತ್ಕರಿಸಿದ್ದು ಕಾಶಿಯಲ್ಲಿ. ಅಲ್ಲ, ದಾರಿಯ ಮಧ್ಯೆ ಸಿಕ್ಕಿದ ಅಂತ್ಯಜನಿಂದ. ಆತ್ಮಜ್ಞಾನಿಯಾಗಲು ಜಾತಿಯೊಂದು ಅಡಚಣೆಯೇ ಅಲ್ಲ, ಆತ್ಮಸಂಸ್ಕಾರವೇ ಮುಖ್ಯ ಎನ್ನುವುದು ಅವರು ಕಂಡುಕೊಂಡ ಸತ್ಯ.

**2. ಸನಾತನ ವೈದಿಕ ಧರ್ಮ ಪುನರ್ ಸ್ಥಾಪನಾಚಾರ್ಯ :** ಅವರು ಹುಟ್ಟಿದ ಸಮಯದಲ್ಲಿ (788ನೇ ಇಸವಿ) ನಮ್ಮ ದೇಶ ಈಗಿನ ಅಫಘಾನಿಸ್ತಾನದಿಂದ ಅಸ್ಸಾಂನ ವರೆಗೆ ಮತ್ತು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹರಡಿತ್ತು. ಆಗಲೇ ಕ್ರಿಶ್ಚಿಯನ್ ಧರ್ಮ ಪ್ರಚಾರಕರು ಕೊಚ್ಚಿನ್ ಹಾಗೂ ಕೇರಳದ ಅಲ್ಲಲ್ಲಿ ಚರ್ಚ್‌ಗಳನ್ನು ಆರಂಭಿಸಿ ಹಲವರನ್ನು ಮತಾಂತರ ಮಾಡಿದ್ದರು. ಭಾರತದ ವಾಯವ್ಯ ಭಾಗದ ಅಫಘಾನಿಸ್ತಾನವು ಇಸ್ಲಾಂ ಆಳ್ವಿಕೆಯಲ್ಲಿದ್ದು ಹಿಂದುಗಳನ್ನೆಲ್ಲಾ ಮುಸ್ಲಿಮರನ್ನಾಗಿ ಮತಾಂತರಿಸಲಾಗಿತ್ತು. ಆಗ ಭಾರತದ ಭಾಗವಾಗಿದ್ದ ಈಗಿನ ಪಾಕಿಸ್ಥಾನದಲ್ಲಿ ಹಿಂದುಗಳು ಮುಸ್ಲಿಂಗಳಾಗಿ ಮತಾಂತರಗೊಳ್ಳುತ್ತಿದ್ದರು. ಬೌದ್ಧ ಧರ್ಮವು ರಾಜರ ಧರ್ಮವಾಗಿ ಪ್ರಚಾರದಲ್ಲಿತ್ತು. ಹಿಂದೂ ಧರ್ಮ ಮಾತ್ರ ವೇದ ಪ್ರಣೀತ ವೈದಿಕ ಧರ್ಮವಾಗಿರದೆ ಪುರೋಹಿತಶಾಹಿ ಧರ್ಮವಾಗಿತ್ತು. ಪ್ರತಿಯೊಬ್ಬ ಶ್ರೇಷ್ಠ ಪುರೋಹಿತನೂ ಹಿಂದೂ ಧರ್ಮವನ್ನು ಅವನಿಗೆ ತೋಚಿದ ರೀತಿಯಲ್ಲಿ ಅರ್ಥೈಸಿ ಬೋಧಿಸಿದ ಪರಿಣಾಮದಿಂದ ಒಂದೊಂದು ಊರಿನಲ್ಲಿ ಒಂದೊಂದು ಪದ್ಧತಿ ಆಚರಣೆಯಲ್ಲಿತ್ತು.

ಹಿಂದೂ ಧರ್ಮವು ಈ ದುರವಸ್ಥೆಯಲ್ಲಿದ್ದಾಗ ಜನ್ಮ ತಾಳಿದ ಶ್ರೀಶಂಕರಾಚಾರ್ಯರು ಕಂಡುಕೊಂಡ ಸತ್ಯವೇನೆಂದರೆ ವೇದ, ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಗಳನ್ನು ಸುಲಭವಾಗಿ ಜನರಿಗೆ ಅರ್ಥಮಾಡಿಕೊಳ್ಳಲು ಆಗದಿರುವುದು. ಪುರೋಹಿತರು ಅವರಿಗೆ ಅರ್ಥವಾದ ರೀತಿಯಲ್ಲಿ ಬೋಧಿಸಿದುದರಿಂದ ಹಿಂದೂಧರ್ಮ ವೇದಪ್ರಣೀತವಾಗದೆ ಪುರೋಹಿತಶಾಹಿಯಾಗಿತ್ತು. ಇದಕ್ಕಾಗಿ ಶಂಕರರು ವೇದ, ಉಪನಿಷತ್ತು, ಭಗವದ್ಗೀತೆಗೆ ಭಾಷ್ಯವನ್ನು ಬರೆದು ಜನಸಾಮಾನ್ಯರಿಗೆ ಅರ್ಥವಾಗುವಂತೆ ಮಾಡಿ, ಅದನ್ನು ಶಿಷ್ಯರೊಡಗೂಡಿ ಎಲ್ಲಾ ಕಡೆ ಬೋಧಿಸಿ ಪುರೋಹಿತರನ್ನು ಇತರ ಸನ್ಯಾಸಿಗಳನ್ನು ನ್ಯಾಯಯುತವಾದ ವಾದದಿಂದ ಸೋಲಿಸಿ, ಅವರನ್ನು ಶಿಷ್ಯರನ್ನಾಗಿಸಿ, ಸನಾತನ ವೈದಿಕ ಧರ್ಮದ ಪುನರ್‌ಸ್ಥಾಪನಾಚಾರ್ಯರಾದರು.

**3. ಷಟ್‌ಮತ ಸ್ಥಾಪನಾಚಾರ್ಯ :** ಅವರು ಜನ್ಮತಾಳಿದ ಕಾಲದಲ್ಲಿದ್ದ ಪುರೋಹಿತಷಾಹಿ ಹಿಂದೂ ಧರ್ಮದಲ್ಲಿ ಸಾವಿರಾರು ದೇವತೆಗಳನ್ನು ಅವರವರಿಗೆ ಇಷ್ಟ ಬಂದಂತೆ ಪೂಜಿಸಲಾಗುತ್ತಿತ್ತು. ಉದಾ: ಅಸ್ಸಾಂ, ಬಂಗಾಲ, ಪಂಜಾಬ್‌ಗಳಲ್ಲಿ ದುರ್ಗೆ, ಒರಿಸ್ಸಾದಲ್ಲಿ ಸೂರ್ಯ, ಆಂಧ್ರ, ಮಧ್ಯಪ್ರದೇಶ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಶಿವ, ತಮಿಳುನಾಡಿನಲ್ಲಿ ಸ್ಕಂದ, ಮಹಾರಾಷ್ಟ್ರದಲ್ಲಿ ಗಣಪತಿ, ಉತ್ತರಪ್ರದೇಶ, ಹರಿಯಾಣ, ಗುಜರಾತ್, ರಾಜಸ್ಥಾನದಲ್ಲಿ ರಾಮ, ಕೃಷ್ಣರ ರೂಪದಲ್ಲಿ ವಿಷ್ಣು, ಹೀಗೆ 6 ಪ್ರಧಾನ ದೇವತೆಗಳನ್ನು ಒಂದುಗೂಡಿಸಿ ಧಾರ್ಮಿಕ ಮತ್ತು ರಾಷ್ಟ್ರೀಯ ಭಾವೈಕ್ಯದ ಮಹತ್ಕಾರ್ಯವನ್ನು ಮಾಡಿದ ಪ್ರಥಮ ಆಚಾರ್ಯರು ಶಂಕರಾಚಾರ್ಯರು. ಜನರಿಗೆ ಅವರವರ ಇಷ್ಟದಂತೆ ದೇವರನ್ನು ಪೂಜಿಸಲು ಹೇಳಿ ಎಲ್ಲವೂ ಸಲ್ಲುವುದು ಒಬ್ಬ ದೇವನಿಗೆ ಎಂದು ಬೋಧಿಸಿ ಧರ್ಮದಲ್ಲಿ ಏಕತೆಯನ್ನು ತಂದು ಷಟ್‌ಮತ ಸ್ಥಾಪನಾಚಾರ್ಯರಾದರು.

**4. ಪಂಚಾಯತನ ಪೂಜಾ ಪದ್ಧತಿ :** ಶ್ರೀಶಂಕರರು ಜನಿಸಿದ ಕಾಲದಲ್ಲಿ ದೇಶದ ಹಲವು ಭಾಗದಲ್ಲಿ ದೇವರನ್ನು ಪೂಜಿಸುವ ಪದ್ಧತಿಯು ಅವೈದಿಕವಾಗಿತ್ತು. ಬೇರೆ ಬೇರೆ ದೇವತೆಯನ್ನು ಒಲಿಸಲು ಬೇರೆ ಬೇರೆ ರೀತಿಯ ಪೂಜೆ, ಬಲಿ, ಸಮರ್ಪಣೆಯಾಗುತ್ತಿತ್ತು. ಅಸ್ಸಾಂನಲ್ಲಿ ದೇವಿಯನ್ನು ಒಲಿಸಲು ಕನ್ನಿಕೆಯನ್ನು, ಬಂಗಾಲದಲ್ಲಿ ಆಡು, ಇನ್ನು ಕೆಲವು ಕಡೆ ಕೋಣ, ಕೋಳಿ, ಮಕ್ಕಳನ್ನು ಬಲಿ ಕೊಡುತ್ತಿದ್ದರೆ ಶ್ರೀಶೈಲದಲ್ಲಿ ಸಾತ್ವಿಕ ಮನುಷ್ಯನನ್ನು ಬಲಿಕೊಡುತ್ತಿದ್ದರು. ಕಾಪಾಲಿಕರೆನ್ನುವ ಭೈರವ ಪೂಜಕರು ಬಲಿ ಕೊಟ್ಟ ಮನುಷ್ಯನ ರುಂಡವನ್ನು ಧರಿಸುತ್ತಿದ್ದರು. ಜಾಸ್ತಿ ಮನುಷ್ಯನ ರುಂಡವನ್ನು ಧರಿಸಿಕೊಂಡವನು ಕುಲಶ್ರೇಷ್ಠನಾಗಿರುತ್ತಿದ್ದ. ಇಂತಹ ಅವೈದಿಕ, ಅನಿಷ್ಟ ಪೂಜಾ ಪದ್ಧತಿಯನ್ನು ಖಂಡಿಸಿ, ವೈದಿಕ ಧರ್ಮದ ವಿಧಿ ವಿಧಾನಗಳನ್ನು ಪರಿಷ್ಕರಿಸಿ ಎಲ್ಲರಿಗೂ ಅನುಕೂಲವಾಗುವಂತೆ ಸರ್ವಮಾನ್ಯವಾದ ಪಂಚಾಯತನ ಪೂಜಾ ಪದ್ಧತಿಯನ್ನು ಪ್ರೇರೇಪಿಸಿ ವೈದಿಕ ಧರ್ಮವನ್ನು ಉದ್ಧರಿಸಿದ ಮಹಾನ್ ಆಚಾರ್ಯರು ಶಂಕರಾಚಾರ್ಯರು.

**5. ಚತುರ ಆಮ್ನಾಯ ಪೀಠಗಳು :** ಶ್ರೀ ಶಂಕರರು ಜನಿಸುವ ಕಾಲದಲ್ಲಿ ಕ್ರೈಸ್ತ ಮತ ಪ್ರಚಾರಕ್ಕೆ ಮಿಷನರಿಗಳು, ಇಸ್ಲಾಂ ಧರ್ಮ ಪ್ರಚಾರಕ್ಕೆ ರಾಜರಿಂದ ಪ್ರೋತ್ಸಾಹಿಸಲ್ಪಟ್ಟ ಅವರ ಧರ್ಮಗುರುಗಳು, ಬೌದ್ಧ ಧರ್ಮ ಪ್ರಚಾರಕ್ಕೆ ರಾಜನಿಂದ ಪ್ರೋತ್ಸಾಹಿಸಲ್ಪಟ್ಟ ಬೌದ್ಧ ಸನ್ಯಾಸಿಗಳು ಮತ ಪ್ರಚಾರ ಮಾಡುತ್ತಿದ್ದರೆ ಪೌರೋಹಿತಶಾಹಿಯಾಗಿದ್ದ ಹಿಂದೂ ಧರ್ಮವು ಯೋಗ್ಯ ರಾಜರ ಪ್ರೋತ್ಸಾಹವಿಲ್ಲದೆ, ವೇದಗಳನ್ನು ಅರ್ಥಮಾಡಿಕೊಂಡ ಜ್ಞಾನಿಗಳಿಲ್ಲದೆ ನಾಶದ ಹಾದಿಯಲ್ಲಿತ್ತು. ಈ ಕಾಲ ಘಟ್ಟದಲ್ಲಿ ಆದಿಶಂಕರರು ಸನಾತನ ಧರ್ಮದ ಸಂರಕ್ಷಣೆ ಮತ್ತು ಉಪನಿಷತ್ತು ಪ್ರತಿಪಾದಿತವಾದ, ವೈಜ್ಞಾನಿಕವಾದ, ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿ ಅದು ಮುಂದೆಯೂ ಸುಸೂತ್ರವಾಗಿ ನಡೆಯುವಂತೆ ನಮ್ಮ ದೇಶದ 4 ದಿಕ್ಕುಗಳಲ್ಲಿ 4 ಮಠಗಳನ್ನು ಸ್ಥಾಪಿಸಿದರು. ಆ ಕಾಲದಲ್ಲಿ ಅವರಿಗಿದ್ದ ಅಖಂಡ ಭಾರತದ ಕಲ್ಪನೆ ಬಹಳ ಆಶ್ಚರ್ಯಕರ.

ದೇಶದ ದಕ್ಷಿಣ ಭಾಗಕ್ಕೆ ಶೃಂಗೇರಿ ಪೀಠ ಸ್ಥಾಪಿಸಿ ಅದಕ್ಕೆ ಅಧಿಪತಿಯಾಗಿ ಮಧ್ಯಪ್ರದೇಶದ ಮಂಡನಮಿಶ್ರರು, ಶಂಕರಾಚಾರ್ಯರ ಶಿಷ್ಯರಾದ ಮೇಲೆ ಶ್ರೀ ಸುರೇಶಾಚಾರ್ಯರು ಅಧಿಪತಿಯಾದರು. ಪಶ್ಚಿಮ ಅರಬ್ಬಿಸಮುದ್ರದ ದಡದಲ್ಲಿರುವ ದ್ವಾರಕೆಯ ಗೋವರ್ಧನ ಪೀಠಕ್ಕೆ ಚೋಳ ರಾಜ್ಯದ (ಈಗಿನ ತಮಿಳುನಾಡಿನ) 'ಸನಂದರು', ಶಂಕರಾಚಾರ್ಯರ ಶಿಷ್ಯರಾದ ಮೇಲೆ ಪದ್ಮಪಾದರು ಮುಖ್ಯಸ್ಥರಾದರು. ಹಿಮಾಲಯದ ಬದರಿಯಲ್ಲಿರುವ ಜ್ಯೋತಿರ್‌ಪೀಠಕ್ಕೆ ತೀರ್ಥಹಳ್ಳಿ ಹತ್ತಿರದ 'ಗಿರಿ' ನಾಮದ, ಶಿಷ್ಯರಾದ ಮೇಲೆ ತೋಟಕಾಚಾರ್ಯರನ್ನು ಮತ್ತು ಬಂಗಾಲ ಕೊಲ್ಲಿಯ ದಡದಲ್ಲಿರುವ ಪೂರ್ವದ ಪುರಿಯಲ್ಲಿಯ ಕಾಳಿಕಾಪೀಠಕ್ಕೆ ಉಡುಪಿಯ ಹತ್ತಿರದ 'ಪ್ರಭಾಕರ', ಶಿಷ್ಯರಾದ ಮೇಲೆ ಹಸ್ತಾಮಲಕರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಇನ್ನು ಪೂರ್ವದ ಕಾಳಿಕಾಪೀಠಕ್ಕೆ 'ಪ್ರಜ್ಞಾನಂ ಬ್ರಹ್ಮ' ಅಂದರೆ ಬ್ರಹ್ಮನೇ ಜ್ಞಾನ ಎನ್ನುವ ಮಹಾವಾಕ್ಯವನ್ನು ಹಾಗೂ ಋಗ್ವೇದವನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಕೊಟ್ಟು, ದಕ್ಷಿಣದ ಶೃಂಗೇರಿ ಪೀಠಕ್ಕೆ 'ತತ್ವಮಸಿ' ಎನ್ನುವ ಮಹಾವಾಕ್ಯ ಹಾಗೂ ಯಜುರ್ವೇದವನ್ನು ಸಂರಕ್ಷಿಸುವ ಜವಾಬ್ದಾರಿಯನ್ನು, ಪಶ್ಚಿಮದ ದ್ವಾರಕಾಪೀಠಕ್ಕೆ 'ಅಹಂ ಬ್ರಹ್ಮಂ' ಎನ್ನುವ ಮಹಾವಾಕ್ಯವನ್ನು ಮತ್ತು ಸಾಮವೇದವನ್ನು ಸಂರಕ್ಷಿಸುವ ಜವಾಬ್ದಾರಿಯನ್ನು, ಉತ್ತರದ ಜ್ಯೋತಿರ್‌ಪೀಠಕ್ಕೆ 'ಅಯನಾತ್ಮ ಬ್ರಹ್ಮ' ಎನ್ನುವ ಮಹಾವಾಕ್ಯ ಮತ್ತು ಅಥರ್ವ ವೇದವನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಕೊಟ್ಟು ಸೂಕ್ತವಾದ ಧರ್ಮಕಾರ್ಯಗಳನ್ನು ನಡೆಸಿಕೊಂಡು ಸನಾತನ ವೈದಿಕ ಧರ್ಮವನ್ನು ಉಳಿಸಿ ಬೆಳೆಸುವ ಕಾರ್ಯ ಮಾಡಿದರು. ಹಿಂದೂ ಧರ್ಮದಲ್ಲಿ ಧಾರ್ಮಿಕ ಭಾವೈಕ್ಯವನ್ನು ಬೆಳೆಸಲು ವೇದ, ಉಪನಿಷತುಗಳನ್ನು ಸಂರಕ್ಷಿಸಿ ಧರ್ಮ ರಕ್ಷಣೆಗೆ ಪೀಠ ಪದ್ಧತಿಯನ್ನು ಜಾರಿಗೆ ತಂದ ಪ್ರಥಮ ಆಚಾರ್ಯರು ಶ್ರೀ ಶಂಕರರು.

ಈಗಿನ ಆಡಳಿತೆಯಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಪೋಲೀಸ್ ಅಧಿಕಾರಿಯಾಗಿ ಆ ಜಿಲ್ಲೆಯವರನ್ನು ಅಥವಾ ಆ ರಾಜ್ಯದವರನ್ನು ನೇಮಿಸದೆ, ಉತ್ತಮ ಪಾರದರ್ಶಕ ಆಡಳಿತ ನೀಡಲು ಅನುಕೂಲವಾಗುವಂತೆ ಬೇರೆ ಜಿಲ್ಲೆ/ರಾಜ್ಯದವರನ್ನು ನೇಮಿಸುವ ಕ್ರಮ ಬಂದಿದರೆ ಅದನ್ನು ಪ್ರಥಮವಾಗಿ ಮಾಡಿ ತೋರಿಸಿದವರು ಶ್ರೀ ಶಂಕರಾಚಾರ್ಯರು. ಅವರು ನೇಮಿಸಿದ ನಾಲ್ಕು ಮಠಾಧೀಶರು ಬೇರೆ ರಾಜ್ಯ, ಭಾಷೆಯವರಾಗಿದ್ದು ಅದರಿಂದ ರಾಷ್ಟ್ರೀಯ ಭಾವೈಕ್ಯ ಸಾಧಿಸಲು ಸಾಧ್ಯವಾಯಿತು. ಇದರೊಂದಿಗೆ ಬದರಿ ನಾರಾಯಣನನ್ನು ಪುನಃ ಪ್ರತಿಷ್ಠೆ ಮಾಡಿ ಪೂಜೆಗೆ ಕೇರಳದ ನಂಬೂದರಿಯನ್ನು, ಕಾಠಮಂಡುವಿನ ಪಶುಪತಿನಾಥ ದೇವಸ್ಥಾನಕ್ಕೆ ಅರ್ಚಕರಾಗಿ ನಮ್ಮ ಕರಾವಳಿ ಜಿಲ್ಲೆಯವರನ್ನು ನೇಮಿಸಿ ರಾಷ್ಟ್ರೀಯ ಭಾವೈಕ್ಯ/ಸಮಗ್ರತೆಯನ್ನು ಸಾಧಿಸಿದರು. ಅವರ ನಂತರ ಬಂದ ಆಚಾರ್ಯರಂತೆ ಅವರ ಊರಿನ ಸುತ್ತ ಮಠ ಸ್ಥಾಪನೆ ಮಾಡಿ ರಕ್ತ ಸಂಬಂಧಿಕರನ್ನು ಪೀಠಾಧೀಶರನ್ನಾಗಿ ನೇಮಿಸದೆ ಅಖಂಡ ಭಾರತವನ್ನು ಗುರಿಯಾಗಿರಿಸಿ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಿದ್ದು ನೋಡುವಾಗ ಅವರ ದೂರದೃಷ್ಟಿ ಮತ್ತು ಚಿಂತನೆ ನಿಜವಾಗಿಯೂ ಆಶ್ಚರ್ಯಕರವಾದದ್ದು.

**6. ಕಾಶ್ಮೀರದಲ್ಲಿ ಸರ್ವಜ್ಞ ಪೀಠಾರೋಹಣ:** ಆಗಿನ ಕಾಶ್ಮೀರದ ಅಧಿದೇವತೆ ಶ್ರೀಶಾರದಾ ದೇವಿಯ ಪ್ರಾಚೀನ ಮಂದಿರವು ಈಗಿನ ಪಾಕಿಸ್ತಾನದ ವಶವಿರುವ ಕಾಶ್ಮೀರದ 'ಮುಜಾಫರಬಾದ' ಪೇಟೆಯ ಸಮೀಪ ಪಾಳುಬಿದ್ದ ಸ್ಥಿತಿಯಲ್ಲಿ ಈಗಲೂ ಇದೆ. ಈ ಮಂದಿರದಲ್ಲಿ ಇರುವುದು ಸರ್ವಜ್ಞ ಪೀಠ. ಕಾಶ್ಮೀರ ಆಗ ದೇಶದ ಮೇಧಾವಿ ಪಂಡಿತೋತ್ತಮರ ಬೀಡು. ಈ ಎಲ್ಲಾ ಶಾಸ್ತ್ರ ಜ್ಞಾನವಿರುವ ಪಂಡಿತರನ್ನು ವಾದದಲ್ಲಿ ಸೋಲಿಸಿದವರು ಆ ಪೀಠವನ್ನು ಏರಲು ಅರ್ಹರು. ಶ್ರೀ ಶಂಕರರು ಅವರನ್ನೆಲ್ಲಾ ಶಾಸ್ತ್ರಧಾರೆಯಲ್ಲಿ ಸೋಲಿಸಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ ಸರ್ವಜ್ಞ ಪೀಠಾರೋಹಣ ಮಾಡಿದರು. ಈ ಸರ್ವಜ್ಞ ಪೀಠವು ಈಗ ಎಲ್ಲ ಮಠದಲ್ಲಿರುವ ಸರ್ವಜ್ಞ ಪೀಠದಂತಿಲ್ಲ ಎನ್ನುವುದೇ ಇದರ ವೈಶಿಷ್ಟ್ಯ. ಕಾಶ್ಮೀರದ ಪುರವಾಸಿನಿಯಾಗಿದ್ದ ಶ್ರೀಶಾರದೆ ಈಗ ನಮಗೆ ಶೃಂಗೇರಿ ಪುರವಾಸಿನಿಯಾಗಿದ್ದಾಳೆ. ಇದೂ ಶ್ರೀಶಂಕರರ ದೂರದೃಷ್ಟಿಯೇ.

**7. ಬ್ರಹ್ಮೈಕ್ಯ :** ಶ್ರೀ ಶಂಕರರು ಈ ಎಲ್ಲಾ ಕೆಲಸ ಗಳನ್ನು 32 ವರ್ಷದ ಒಳಗೆ ಮಾಡಿದ್ದಾರೆ ಎನ್ನುವುದೇ ಪರಮಾಶ್ಚರ್ಯ. ಅವರಂತೆ ದೇಶ, ಧರ್ಮಕ್ಕಾಗಿ ಕೆಲಸ ಮಾಡಿದ ಆಚಾರ್ಯರು ಈ ವರೆಗೆ ಹುಟ್ಟಲಿಲ್ಲ. ಮತ್ತು ಇದು ಆತ್ಮ ಮಾತ್ರನಿಂದ ಸಾಧ್ಯವಾಗದ ಕೆಲಸ. ಹಾಗಾಗಿ ಶ್ರೀ ಶಂಕರರು ಪರಮ ಆತ್ಮರು ಅಥವಾ ದೇವರೇ ಎಂದು ನಂಬಬೇಕಾಗುತ್ತದೆ. ಅವರ ಜನ್ಮವಾಗದಿದ್ದರೆ ಸನಾತನ ವೈದಿಕ ಹಿಂದೂ ಧರ್ಮ ಇಂದು ಇರುತ್ತಿರಲಿಲ್ಲ. ಮತ್ತು ಆ ಮೇಲಿನ ಆಚಾರ್ಯ ಪರಂಪರೆಯೂ ಇರುತ್ತಿರಲಿಲ್ಲ. ಹಾಗಾಗಿ ಶ್ರೀ ಶಂಕರರು ಹಿಂದೂ ಧರ್ಮೀಯರಿಗೆಲ್ಲ ಪ್ರಾತಃ ಸ್ಮರಣೀಯರು. ಕೊನೆಯ ಪಕ್ಷ ಶಂಕರ ಜಯಂತಿಯಂದು ಆದರೂ ಹಿಂದೂ ಧರ್ಮೀಯರೆಲ್ಲ ಅವರನ್ನು ಸ್ಮರಿಸಿ ಕೃತಜ್ಞರಾಗಬೇಕು.

ದಕ್ಷಿಣದ ಕಾಲಟಿಯಲ್ಲಿ ಜನಿಸಿದ ಶ್ರೀಶಂಕರರು ಹಿಮಾಲಯದ ಬದರಿಯನ್ನು ಸಂದರ್ಶಿಸಿ ಕೇದಾರದಲ್ಲಿ ತನ್ನ ಶರೀರವನ್ನು ತ್ಯಜಿಸಿ ಬ್ರಹ್ಮೈಕ್ಯರಾದರು ಎಂದು ಪ್ರತೀತಿ.

**ಅವರ ಕೊಡುಗೆ :** ವೈಜ್ಞಾನಿಕವಾದ ಅದ್ವೈತ ಸಿದ್ಧಾಂತ, ರಾಷ್ಟ್ರೀಯ ಭಾವೈಕ್ಯ, ಧಾರ್ಮಿಕ ಸಮಗ್ರತೆ, ಸನಾತನ ಧರ್ಮದ ಸಂರಕ್ಷಣೆ, ಪ್ರಸ್ಥಾನತ್ರಯಗಳಿಗೆ ಪ್ರಥಮ ಭಾಷ್ಯ, ಮತ್ತು ವೈದಿಕ ಧರ್ಮಗಳ ವಿಧಿ ವಿಧಾನಗಳ ಪರಿಷ್ಕರಣೆ ಇವರ ಮುಖ್ಯ ಕೊಡುಗೆಗಳಾಗಿವೆ. ಇದನ್ನು ಸಂರಕ್ಷಿಸಲು ನಾಲ್ಕು ದಿಕ್ಕುಗಳಲ್ಲಿ 4 ಮಠಗಳನ್ನು ಸ್ಥಾಪಿಸಿ ಹಿಂದೂ ಧರ್ಮದಲ್ಲಿದ್ದ ಸಮಸ್ಯೆಗಳಿಗೆ ವೈಜ್ಞಾನಿಕವಾದ, ಸರ್ವಕಾಲಕ್ಕೂ ಮಾನ್ಯವಾದ ಸೂಕ್ತ ಪರಿಹಾರವನ್ನು ಕೊಟ್ಟು ಅವರು ಒಬ್ಬ ''Modern Management'' ''ಗುರುಗಳ ಗುರು'' ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. □

ಅಭಿನಂದನೆ

## ಕಾರ್ಕಳ ರೋಟರಿ ಕ್ಲಬ್ ಉಪಾಧ್ಯಕ್ಷರಾಗಿ ಶ್ರೀಮತಿ ಜ್ಯೋತಿ ಪದ್ಮನಾಭ



ಪ್ರತಿಷ್ಠಿತ ರೋಟರಿ ಕ್ಲಬ್ ಕಾರ್ಕಳ ಇದರ ಈ ಸಾಲಿನ ಉಪಾಧ್ಯಕ್ಷರಾಗಿ ಹಾಗೂ 2013ನೇ ಸಾಲಿನ ಚುನಾಯಿತ ಅಧ್ಯಕ್ಷರಾಗಿ ನಮ್ಮ ಸಮಾಜದ ಶ್ರೀಮತಿ ಜ್ಯೋತಿ ಪದ್ಮನಾಭ್ ಅವರು ಆಯ್ಕೆಯಾಗಿದ್ದಾರೆ. ಕಾರ್ಕಳದ ಕೆ.ಎಂ.ಇ.ಎಸ್. ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರಾಗಿರುವ ಇವರು ಕಾರ್ಕಳದಲ್ಲಿ ಎಲ್.ಐ.ಸಿ.ಯಲ್ಲಿ ಅಧಿಕಾರಿಯಾಗಿರುವ ಅಂತರಾಷ್ಟ್ರೀಯ ಕ್ರೀಡಾಪಟು ಶ್ರೀ ಪದ್ಮನಾಭ ಭಂಡಿಯವರ ಧರ್ಮಪತ್ನಿ. ಕಳೆದ ಸಾಲಿನಲ್ಲಿ ಇವರು ಕಾರ್ಕಳ ರೋಟರ್ಯಾಕ್ಟ್ ಸಭಾಪತಿಯಾಗಿದ್ದಾಗ, ಇವರ ತಂಡವು ಮೈಸೂರು ಹಾಗೂ ಕರಾವಳಿ ವಲಯವನ್ನೊಳಗೊಂಡ ರೋಟರಿ ಜಿಲ್ಲೆ 318ರಿಂದ ''ಅತೀ ಉತ್ತಮ'' ಸಂಸ್ಥೆ ಪ್ರಶಸ್ತಿಯನ್ನು ಪಡೆದಿತ್ತು.

## ಶ್ರೀ ಹರಿಪ್ರಸಾದ್ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕಾರ



ಉಡುಪಿಯ ಮಹೇಶ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಶ್ರೀ ಹರಿಪ್ರಸಾದ್ ಇವರು ಅಧಿಕಾರ ಸ್ವೀಕರಿಸಿದ್ದಾರೆ. ಎಂ.ಜಿ.ಎಂ. ಕಾಲೇಜು ಉಡುಪಿ ಹಾಗೂ ಮಣಿಪಾಲ ಪದವಿಪೂರ್ವ ಕಾಲೇಜುಗಳಲ್ಲಿ ರಸಾಯನಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದ ಇವರು, ಉಡುಪಿ ಜಿಲ್ಲೆಯಲ್ಲಿಯೇ ಅತ್ಯಂತ ಕಿರಿಯ ವಯಸ್ಸಿನಲ್ಲಿ ಪ್ರಾಂಶುಪಾಲ ರಾದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇವರು ಮುದ್ರಾಡಿಯ ಶ್ರೀಮತಿ ಶಾಂಭವಿ ಹಾಗೂ ಶ್ರೀ ಎಂ.ರಂಗಯ್ಯ ಹೆಬ್ಬಾರರ ಪುತ್ರ.

## ಬೊಕ್ಕಸ ಚಂದ್ರಶೇಖರ ರಾವ್ ಡಿಜಿಎಂ ಹುದ್ದೆಗೆ ಭಡ್ತಿ



ಬೊಕ್ಕಸ ಚಂದ್ರಶೇಖರ ರಾಯರು ಕರ್ಣಾಟಕ ಬ್ಯಾಂಕಿನ ಉಪಮಹಾಪ್ರಬಂಧಕರಾಗಿ ಭಡ್ತಿ ಹೊಂದಿರುತ್ತಾರೆ. 1995ರಲ್ಲಿ ಕರ್ಣಾಟಕ ಬ್ಯಾಂಕಿಗೆ ಸೇರಿದ ಇವರು ಮಂಗಳೂರು, ನವದೆಹಲಿ, ಲುಧಿಯಾನ, ಬೆಂಗಳೂರು ಈ ಎಲ್ಲಾ ಕಡೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಪ್ರಸ್ತುತ ಕರ್ಣಾಟಕ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ದೊಡ್ಡ ಹಾಗೂ ಕಾರ್ಪೋರೇಟ್ ಫೈನಾನ್ಸ್ ವಿಭಾಗದ ಪ್ರಭಾರ ವಹಿಸಿಕೊಂಡಿದ್ದಾರೆ.

### ಮೀನ ಮಾಸದ ವಿಶೇಷ ದಿನಗಳು

| | |
|---|---|
| 18-03-2012 | ಏಕಾದಶೀ |
| 22-03-2012 | ಅಮಾವಾಸ್ಯೆ |
| 23-03-2012 | ಚಾಂದ್ರಯುಗಾದಿ |
| 01-04-2012 | ರಾಮ ನವಮಿ |
| 06-04-2012 | ಹುಣ್ಣಿಮೆ, ಹನುಮಜಯಂತಿ |
| 09-04-2012 | ಸಂಕಷ್ಟಹರ ಚೌತಿ |
| 13-04-2012 | ಮೇಷ ಸಂಕ್ರಮಣ |
| 14-04-2012 | ಸೌರ ಯುಗಾದಿ |

# ವೈದ್ಯಕೀಯ ವೇದಿಕೆ–ಪ್ರಶ್ನೆ ಮತ್ತು ಉತ್ತರ

ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ಕಾಮಾಲೆ ರೋಗ (jaundice)ದ ಕಾರಣಗಳೇನು ಮತ್ತು ಅದರ ಚಿಕಿತ್ಸೆ ಹೇಗೆ?**

**ಉತ್ತರ :** ನಮ್ಮ ದೇಹದಲ್ಲಿ ಕೆಂಪು ರಕ್ತಕಣಗಳು ಎಲುಬಿನೊಳಗೆ ಇರುವ ಅಸ್ಥಿಮಜ್ಜೆಯಲ್ಲಿ ಉತ್ಪತ್ತಿಯಾಗುತ್ತವೆ. ಈ ಕೆಂಪುರಕ್ತಕಣಗಳ ಆಯುಷ್ಯ ಮೂರು ತಿಂಗಳು ಮಾತ್ರ. ಆಯುಷ್ಯ ಪೂರ್ತಿಯಾದ ಕೆಂಪುರಕ್ತಕಣಗಳು ಒಡೆದು ಸಾಯುತ್ತವೆ ಹಾಗೂ ಅವುಗಳ ಬದಲು ಹೊಸ ರಕ್ತಕಣಗಳು ಉತ್ಪತ್ತಿಯಾಗುತ್ತವೆ. ಈ ಒಡೆದು ಸತ್ತ ರಕ್ತಕಣಗಳಲ್ಲಿ ಇರುವ ಕೆಲವು ವಸ್ತುಗಳಿಂದ ಬಿಲಿರುಬಿನ್ (bilirubin) ಎಂಬ ಹಳದಿಬಣ್ಣದ ತಾಜ್ಯವೊಂದು ತಯಾರಾಗುತ್ತದೆ. ರಕ್ತದಲ್ಲಿರುವ ಈ ತ್ರಾಜ್ಯವನ್ನು ಪಿತ್ತಜನಕಾಂಗವು ಸೋಸಿ, ತಾನು ಸ್ರವಿಸುವ ಪಿತ್ತರಸಕ್ಕೆ ಸೇರಿಸಿ ಕರುಳಿಗೆ ಕಳುಹಿಸುತ್ತದೆ. ಪಿತ್ತಜನಕಾಂಗದಿಂದ ಪಿತ್ತರಸವು ಕರುಳಿಗೆ ಪಿತ್ತನಾಳವೆಂಬ ನಾಳದ ಮೂಲಕ ಹೋಗುತ್ತದೆ. ದಾರಿಯಲ್ಲಿ ಈ ಪಿತ್ತರಸವು ಕರುಳಿಗೆ ಹೋಗುವ ಮುನ್ನ ಪಿತ್ತಕೋಶವೆಂಬ ಸಣ್ಣ ಚೀಲದಲ್ಲಿ ಶೇಖರವಾಗಿಕೊಂಡಿದ್ದು, ನಾವು ಆಹಾರ ಸೇವಿಸಿದ ಕೂಡಲೇ ಪಿತ್ತಕೋಶವು ಸಂಕುಚಿಸಿ ತನ್ನಲ್ಲಿರುವ ಪಿತ್ತರಸವನ್ನು ಕರುಳಿಗೆ ಕಳುಹಿಸುತ್ತದೆ. ಸಾಮಾನ್ಯ ಮನುಷ್ಯನ ರಕ್ತದಲ್ಲಿ ಬಿಲಿರುಬಿನ್‌ನ ಮಟ್ಟ ಸುಮಾರು 0.8ಎಮ್‌ಜಿ ರಿಂದ 1.2ಎಮ್‌ಜಿ ತನಕ ಇರುತ್ತದೆ. ಒಂದು ವೇಳೆ ವಿವಿಧ ಕಾರಣಗಳಿಂದಾಗಿ ರಕ್ತದಲ್ಲಿ ಬಿಲಿರುಬಿನ್‌ನ ಮಟ್ಟ ಏರಿದರೆ ಈ ಹಳದಿಬಣ್ಣದ ವಸ್ತುವಿನಿಂದಾಗಿ ರಕ್ತದ ಬಣ್ಣ (ಕೆಂಪು)ಕ್ಕೆ ಹಳದಿ ಛಾಯೆ ಬರುತ್ತದೆ. ಇದರಿಂದಾಗಿ ಇಡೀ ದೇಹವೇ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದನ್ನು ಕಾಮಾಲೆ ರೋಗ (jaundice) ಎಂದು ಕರೆಯುವರು.

ರಕ್ತದಲ್ಲಿರುವ ಬಿಲಿರುಬಿನನ್ನು ಸೋಸಿ, ಪಿತ್ತರಸಕ್ಕೆ ಸೇರಿಸಿ, ಪಿತ್ತನಾಳದ ಮೂಲಕ ಕರುಳಿಗೆ ಸ್ರವಿಸುವ ಕೆಲಸ ಪಿತ್ತಜನಕಾಂಗದ್ದು. ರಕ್ತದಲ್ಲಿ ಬಿಲಿರುಬಿನ್ ತಯಾರಾದಂತೆಲ್ಲಾ ಪಿತ್ತಜನಕಾಂಗವು ಈ ಕೆಲಸವನ್ನು ಮಾಡುತ್ತಾ ಇದ್ದು, ರಕ್ತದಲ್ಲಿ ಬಿಲಿರುಬಿನ್ ಮಟ್ಟವನ್ನು 0.8 ಎಮ್‌ಜಿಯಿಂದ 1.2ಎಮ್.ಜಿ.ಯೊಳಗೆ ಕಾಯ್ದುಕೊಂಡು ಬರುತ್ತದೆ. ಆದರೆ ಬಿಲಿರುಬಿನ್‌ನನ್ನು ಸೋಸಲು ತಾನು ಹೊಂದಿರುವ ಸಾಮರ್ಥ್ಯಕ್ಕಿಂತಲೂ ಹೆಚ್ಚು ಬಿಲಿರುಬಿನ್ ರಕ್ತದಲ್ಲಿ ಉತ್ಪತ್ತಿಯಾದರೆ ಅಥವಾ ಬಿಲಿರುಬಿನನ್ನು ಸೋಸುವ ಪಿತ್ತಜನಕಾಂಗದ ಸಾಮರ್ಥ್ಯವೇ ಕಡಿಮೆಯಾದರೆ ಅಥವಾ ಪಿತ್ತಜನಕಾಂಗವು ಸೋಸಿದ ನಂತರ ಪಿತ್ತರಸವು ಕರುಳಿಗೆ ಹೋಗಬೇಕಾದ ಪಿತ್ತನಾಳದಲ್ಲಿ ಅಡಚಣೆ ಇದ್ದರೆ, ಹೀಗೆ ಈ ಮೂರು ಕಾರಣಗಳಿಂದ ರಕ್ತದಲ್ಲಿ ಬಿಲಿರುಬಿನ್‌ನ ಮಟ್ಟವನ್ನು ಮಾಮೂಲಿ ಸ್ಥಿತಿಯಲ್ಲಿ ಕಾಯ್ದುಕೊಳ್ಳಲಾಗದೆ ಅದು ಹೆಚ್ಚಾಗುತ್ತದೆ.

ಹೆಪಟೈಟಿಸ್–ಎ ಮತ್ತು ಹೆಪಟೈಟಿಸ್–ಬಿ ಎಂಬೀ ಎರಡು ವೈರಸ್‌ಗಳು ಪಿತ್ತಜನಕಾಂಗದ ಮೇಲೆ ಆಕ್ರಮಣ ಮಾಡಿ ಅದು ಬಾತುಕೊಳ್ಳುವಂತೆ ಮಾಡಿ ಅದರ ಕಾರ್ಯಕ್ಷಮತೆಯನ್ನು ಕಡಿಮೆ ಮಾಡುತ್ತದೆ. ಈ ಎರಡು ವೈರಸ್‌ಗಳು ಮಾತ್ರವಲ್ಲದೆ ಹೈಪಟೈಟಿಸ್–ಸಿ, ಡೆಂಗ್ಯೂ, ಚಿಕನ್‌ಗುನ್ಯಾ, ಹಳದಿಜ್ವರ ಇತ್ಯಾದಿ ಕಾಯಿಲೆ ತರುವ ವೈರಸ್‌ಗಳಿಂದಲೂ ಇದೇ ರೀತಿಯಲ್ಲಿ ಕಾಮಾಲೆ ಬರುವುದುಂಟು. ಕೆಲವೊಮ್ಮೆ ಪಿತ್ತಜನಕಾಂಗದ ಮೇಲೆ ಬ್ಯಾಕ್ಟೀರಿಯಾ ಹಾಗೂ ಅಮೀಬಾ ಜೀವಿಗಳ ಆಕ್ರಮಣದಿಂದಾಗಿ, ಕೆಲವು ಔಷಧಿ, ಮದ್ಯಪಾನ ಮತ್ತು ರಾಸಾಯನಿಕಗಳು, ವಿಷಪದಾರ್ಥಗಳ ಸೇವನೆಯಿಂದಾಗಿಯೂ ಹಾಗೂ ಅಪೌಷ್ಟಿಕತೆಯಿಂದಾಗಿಯೂ ಇದೇ ರೀತಿಯ ಕಾಮಾಲೆ ರೋಗ ಬರಬಹುದು.

ಕೆಲವರಲ್ಲಿ ಕೆಂಪು ರಕ್ತಕಣಗಳು ಅವುಗಳ ಆಯುಷ್ಯಪೂರ್ತಿಯಾಗುವ ಮೊದಲೇ ಒಡೆದು ಸಾಯುವ ಖಾಯಿಲೆಯಿರುತ್ತದೆ. ಇದನ್ನು ಹಿಮೋಲೈಟಿಕ್ ಅನೀಮಿಯಾ ಎಂದು ಕರೆಯುತ್ತಾರೆ. ಈ ಕಾಯಿಲೆಯಿಂದಾಗಿ ರಕ್ತದಲ್ಲಿ ಬಿಲಿರುಬಿನ್ ಹೆಚ್ಚು ತಯಾರಾಗುತ್ತದೆ. ಹೀಗೆ ರಕ್ತದಲ್ಲಿ ಬಿಲಿರುಬಿನ್‌ನ ಪ್ರಮಾಣವು ಪಿತ್ತಜನಕಾಂಗವು ಅದನ್ನು ಸೋಸಿ ಪಿತ್ತರಸದಲ್ಲಿ ಸ್ರವಿಸಬಲ್ಲ ಸಾಮರ್ಥ್ಯಕ್ಕಿಂತ ಹೆಚ್ಚಿದ್ದರೆ ತನ್ನಿಂತಾನಾಗಿಯೇ ರಕ್ತದಲ್ಲಿ ಬಿಲಿರುಬಿನ್‌ನ ಮಟ್ಟ ಏರುತ್ತದೆ. ಕೆಲವೊಮ್ಮೆ ಮಲೇರಿಯಾ, ಇಲಿಜ್ವರ, ಟೈಫಾಯಿಡ್ ಇತ್ಯಾದಿ ಮೀಣಜೀವಿಗಳಿಂದ ಬರುವ ಖಾಯಿಲೆಗಳು ಉಲ್ಬಣಾವಸ್ಥೆಗೆ ಹೋದರೆ, ರಕ್ತದ ಕ್ಯಾನ್ಸರ್ ಸಹಾ ಉಲ್ಬಣವಾದಾಗ ಇದೇ ರೀತಿ ಕೆಂಪುರಕ್ತಕಣಗಳು ಒಡೆದು ಕಾಮಾಲೆ ಆಗಬಹುದು. ಕೆಲವೊಮ್ಮೆ ಕೆಲವು ಔಷಧಿಗಳ ಪ್ರಭಾವದಿಂದಲೂ ಹೀಗಾಗುತ್ತದೆ. ಅದೇ ತಾನೆ ಹುಟ್ಟಿದ ಮಕ್ಕಳಲ್ಲಿ ಮೂರನೇ ದಿನ ಇದೇ ಕಾರಣಕ್ಕೆ ಸಣ್ಣಗೆ ಕಾಮಾಲೆ ಆಗುತ್ತದೆ ಹಾಗೂ ಅದು ಹೆಚ್ಚಿನ ಮಕ್ಕಳಲ್ಲಿ ಎರಡು ಮೂರು ದಿನಗಳಲ್ಲಿ ತನ್ನಿಂತಾನಾಗಿಯೇ ಗುಣವಾಗುತ್ತದೆ.

ಇನ್ನು ಕೆಲವರಿಗೆ ಪಿತ್ತಜನಕಾಂಗದಿಂದ ಕರುಳಿಗೆ ಪಿತ್ತರಸವನ್ನು ಸಾಗಿಸುವ ಪಿತ್ತನಾಳದಲ್ಲಿ ಅಡಚಣೆಯುಂಟಾಗಿ ಪಿತ್ತಜನಕಾಂಗವು ಸೋಸಿದ ಬಿಲಿರುಬಿನ್ ಪಿತ್ತಜನಕಾಂಗದಲ್ಲೇ ನಿಂತು ರಕ್ತದಲ್ಲಿ ನಿಧಾನವಾಗಿ ಬಿಲಿರುಬಿನ್‌ನ ಮಟ್ಟ ಏರುತ್ತದೆ. ಇದನ್ನು ಅಬ್‌ಸ್ಟ್ರಕ್ಟಿವ್ ಜಾಂಡೀಸ್ (obstructive jaundice) ಎನ್ನುತ್ತಾರೆ. ಪಿತ್ತನಾಳದ ಅಡಚಣೆಯು ಅದರಲ್ಲಿ ಕಲ್ಲುಗ್ಗಳಾಗಿ, ಗಡ್ಡೆ ಬೆಳೆದು, ಹುಳಗಳಿಂದಾಗಿ, ನಾಳ ಸಪೂರವಾಗುವುದರಿಂದಾಗಿ, ಜನ್ಮತಃ ಇದ್ದ ಪಿತ್ತನಾಳದ ವೈಕಲ್ಯದಿಂದಾಗಿ ಹಾಗೂ ಕೆಲವು ಶಸ್ತ್ರಚಿಕಿತ್ಸೆಗಳ ಅಡ್ಡಪರಿಣಾಮಗಳಿಂದಾಗಿಯೂ ಆಗಬಹುದು.

ದೇಹದ ಬಣ್ಣ ಹಳದಿ ಬಣ್ಣಕ್ಕೆ ತಿರುಗುವುದು, ಮುಖ್ಯವಾಗಿ ಕಣ್ಣಿನ ಬಿಳಿಗುಡ್ಡೆ ಹಳದಿಯಾಗುವುದು, ಮೂತ್ರದ ಬಣ್ಣ ಹಳದಿಯಾಗುವುದು ಜಾಂಡೀಸು ಕಾಯಿಲೆಯ ಮುಖ್ಯ ಲಕ್ಷಣಗಳು. ಹೊಟ್ಟೆನೋವು, ಹಸಿವು ಕಡಿಮೆಯಾಗುವುದು, ವಾಂತಿ, ಸಣ್ಣಗೆ ಜ್ವರ, ಮೈತುರಿಕೆ, ಪಾಯಿಖಾನೆ ಬಿಳಿ ಬಣ್ಣದ್ದಾಗಿರುವುದು ಇತರ ಚಿಹ್ನೆಗಳು. ಪಿತ್ತಜನಕಾಂಗವು ಗಾತ್ರದಲ್ಲಿ ಹಿಗ್ಗುತ್ತದೆ. ಕಾಮಾಲೆ ಹೆಚ್ಚಿದಂತೆ ಅದು ದೇಹದ ಇತರ ಅಂಗಗಳಾದ ಕಿಡ್ನಿ, ಹೃದಯ, ಮೆದುಳು ಇತ್ಯಾದಿ ಅಂಗಗಳ ಕೆಲಸದ ಮೇಲೂ ಪರಿಣಾಮ ಬೀರುತ್ತದೆ. ಹೀಗಾಗಿ ಮೂತ್ರ ಕಡಿಮೆ ಹೋಗುವುದು, ಹೃದಯದ ಬಡಿತ ನಿಧಾನವಾಗುವುದು, ಅಮಲಿನಲ್ಲಿದ್ದಂತೆ ವರ್ತಿಸುವುದು, ಮೂಗಿನಲ್ಲಿ ರಕ್ತ ಬರುವುದು, ರಕ್ತ ವಾಂತಿಯಾಗುವುದು ಇತ್ಯಾದಿ ಚಿಹ್ನೆಗಳು ಕಾಣಿಸಿಕೊಳ್ಳಬಹುದು. ಈ ಎಲ್ಲಾ ಚಿಹ್ನೆಗಳು ರಕ್ತದಲ್ಲಿ ಬಿಲಿರುಬಿನ್ನ ಮಟ್ಟ ಅಪಾಯಕಾರಿ ಪ್ರಮಾಣಕ್ಕೇರಿರುವುದರ ಸಂಕೇತ. ಇಂತಹಾ ಸಂದರ್ಭಗಳಲ್ಲಿ ಸಾವೂ ಸಂಭವಿಸಬಹುದು.

ರಕ್ತ ಪರೀಕ್ಷೆ ಮತ್ತು ಸ್ಕ್ಯಾನ್ ಮುಖಾಂತರ ಕಾಮಾಲೆ ರೋಗದ ಕಾರಣವನ್ನು ನಿಖರವಾಗಿ ಗುರುತಿಸುವುದು ಕಾಮಾಲೆ ರೋಗದ ಚಿಕಿತ್ಸೆಯಲ್ಲಿ ಅತೀ ಮುಖ್ಯವಾದ ವಿಷಯ. ಕಾಮಾಲೆಗೆ ಕಾರಣವಾದ ವಿಷಯ ತಿಳಿದ ಮೇಲೆ, ಉದಾಹರಣೆಗೆ ಮದ್ಯಪಾನವೋ, ಔಷಧ ಸೇವನೆಯೋ ಆಗಿದ್ದರೆ ಅದನ್ನು ತಕ್ಷಣವೆ ನಿಲ್ಲಿಸಬೇಕು. ಒಂದು ವೇಳೆ ಪಿತ್ತನಾಳದಲ್ಲಿ ಅಡಚಣೆಯುಂಟಾಗಿ ಕಾಮಾಲೆಯಾಗಿದ್ದರೆ ಅಡಚಣೆಯ ಕಾರಣವನ್ನು ಬೇರೆ ಬೇರೆ ಪರೀಕ್ಷೆಗಳಿಂದ ಗುರುತಿಸಿ ಅದನ್ನು ಸೂಕ್ತ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬೇಕಾಗುತ್ತದೆ. ರಕ್ತದಲ್ಲಿ ಬಿಲಿರುಬಿನ್‌ನ ಉತ್ಪತ್ತಿ ಅಧಿಕವಾಗಿ ಕಾಮಾಲೆ ಆಗಿರುವ ಕೇಸುಗಳಲ್ಲಿ ಈ ವಿಷಯದಲ್ಲಿ ಇನ್ನೂ ಹೆಚ್ಚಿನ ತಪಾಸಣೆ ನಡೆಸಿ ನಿಜವಾದ ಕಾಯಿಲೆಯನ್ನು ಪತ್ತೆ ಹಚ್ಚಿ ಚಿಕಿತ್ಸೆ ಮಾಡಬೇಕಾಗುತ್ತದೆ.

ಪಿತ್ತಜನಕಾಂಗವು ಬಾತುಕೊಂಡು ಅದರ ಕ್ಷಮತೆ ಕಡಿಮೆಯಾಗಿ ಕಾಮಾಲೆಯಾಗುವುದು ಕಾಮಾಲೆ ರೋಗಕ್ಕೆ ಅತ್ಯಂತ ಸಾಮಾನ್ಯ ಕಾರಣ. ಈ ರೀತಿಯ ಕಾಮಾಲೆ ಹೆಚ್ಚಾಗಿ ಹೈಪಟೈಟಿಸ್ ವೈರಸ್‌ನಿಂದ ಆಗುತ್ತದೆ. ಈ ಖಾಯಿಲೆಯನ್ನು ಹೈಪಟೈಟಿಸ್ ಎಂದು ಕರೆಯುತ್ತೇವೆ. ಈ ಖಾಯಿಲೆಯನ್ನು ಎರಡರಿಂದ ಮೂರು ವಾರಗಳಲ್ಲಿ ದೇಹವೇ ತಾನೇ ಪ್ರತಿರೋಧಶಕ್ತಿಯನ್ನು ಬೆಳೆಸಿಕೊಳ್ಳುವ ಮೂಲಕ ಗುಣಮಾಡಿಕೊಳ್ಳುತ್ತದೆ. ಈ ಸಮಯದಲ್ಲಿ ವಿಶ್ರಾಂತಿ, ಪೌಷ್ಠಿಕ ಹಾಗೂ ಗ್ಲುಕೋಸ್ ಯುಕ್ತ ಆಹಾರ ಸೇವನೆ, ಸಾಕಷ್ಟು ನೀರು ಕುಡಿಯುವುದು, ಮತ್ತು ಪಿತ್ತಜನಕಾಂಗದ ಆರೋಗ್ಯವರ್ಧನೆ ಮಾಡುವ ಕೆಲವು ಔಷಧಿಗಳನ್ನು ಸೇವಿಸುವುದರಿಂದ ಈ ಕಾಯಿಲೆ ಬೇಗನೆ ಗುಣವಾಗುತ್ತದೆ.

ಕಾಮಾಲೆ ರೋಗಿಗಳಿಗೆ ಪಥ್ಯಹೇಳದೇ ಔಷಧ ಕೊಟ್ಟರೆ ಔಷಧವೇ ಅಪಥ್ಯವಾದೀತು! ಪಿತ್ತರಸವು ಕೊಬ್ಬನ್ನು ಜೀರ್ಣಿಸಲು ಅಗತ್ಯವಾದುದರಿಂದ ಕಾಮಾಲೆ ರೋಗಿಗಳು ಎಣ್ಣೆ ಪದಾರ್ಥಗಳನ್ನು ತಿಂದರೆ ಸುಲಭವಾಗಿ ಜೀರ್ಣಿಸದು. ಆಹಾರದಲ್ಲಿರುವ ಪ್ರೋಟೀನ್ ಜೀರ್ಣವಾಗುವಾಗ ಹೊರಬರುವ ಕೆಲ ವಿಷಪದಾರ್ಥಗಳು ಈ ರೋಗಿಗಳಿಗೆ ಅಧಿಕ ಹಾನಿಯುಂಟು ಮಾಡುವುದರಿಂದ ಆದಷ್ಟು ಬೇಳೆಕಾಳು, ಹಾಲು ಮೊಟ್ಟೆ ಹಾಗೂ ಮಾಂಸಾಹಾರ ವ್ಯರ್ಜಿಸಬೇಕು. ಹಸಿವು ಕಡಿಮೆ ಇರುವುದರಿಂದ ತಿನ್ನಲು ಮೃದುವಾಗಿಯೂ, ರುಚಿಶುಚಿಯಾಗಿಯೂ ಆಗಿರುವ ಸಾತ್ವಿಕ ಆಹಾರ ಒಳ್ಳೆಯದು. ಶರ್ಕರಪಿಷ್ಟಗಳು ಪಿತ್ತಜನಕಾಂಗಕ್ಕೆ ಚೇತೋಹಾರಿಯಾದುದರಿಂದ ಗ್ಲುಕೋಸ ಸೇವನೆ, ಕಬ್ಬು ಹಾಗೂ ಹಣ್ಣಿನ ರಸ ಸೇವನ ಒಳ್ಳೆಯದು. ಸಾಕಷ್ಟು ನೀರು, ಎಳನೀರು ಕುಡಿಯುವ ಮೂಲಕ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗದಂತೆ ಜಾಗ್ರತೆವಹಿಸಬೇಕು.

ಕಾಮಾಲೆ ಸರಿಯಾದ ಸಮಯದಲ್ಲಿ ಗುಣವಾಗದಿದ್ದರೆ ಅದು ಪಿತ್ತಜನಕಾಂಗವನ್ನು ಹಾಳು ಮಾಡುತ್ತದೆ. ಇದನ್ನು ಸಿರೋಸಿಸ್ ಎಂದು ಕರೆಯುತ್ತೇವೆ. ಈ ಹಂತಕ್ಕೆ ತಲುಪಿದ ಮೇಲೆ ಕಾಮಾಲೆ ರೋಗವನ್ನು ವಾಸಿಮಾಡುವುದು ಕಷ್ಟ, ಸಿರೋಸಿಸ್ ಹಂತಕ್ಕೆ ತಲುಪಿರುವುದನ್ನು ಸ್ಕ್ಯಾನ್ ಮುಖಾಂತರ ಖಚಿತಪಡಿಸಿಕೊಳ್ಳಬಸುದು. ಇಂತಹವರಿಗೆ ಆರೋಗ್ಯ ತೀರಾ ಹದಗೆಟ್ಟರೆ ಹಾಗೂ ಔಷಧಿಯಿಂದ ಇನ್ನು ಉಪಯೋಗವಿಲ್ಲ ಎಂದಾದರೆ ಇನ್ನೊಬ್ಬನ ಪಿತ್ತಜನಕಾಂಗವನ್ನು ಕಸಿ ಮಾಡಿ ಗುಣಪಡಿಸುವ ಚಿಕಿತ್ಸೆ ಈಗ ಭಾರತದಲ್ಲೂ ಲಭ್ಯವಿದೆ.

ಹೈಪಟೈಟಿಸ್–ಎ ಮತ್ತು ಬಿ ವೈರಸ್‌ನಿಂದ ಬರುವ ಕಾಮಾಲೆಯನ್ನು ಬರದಂತೆ ತಡೆಗಟ್ಟುವ ಲಸಿಕೆಗಳು ಲಭ್ಯವಿವೆ. ಎಲ್ಲರೂ ಈ ಲಸಿಕೆಗಳನ್ನು, ಕನಿಷ್ಟಪಕ್ಷ ಹೈಪಟೈಟಿಸ್–ಬಿ ಲಸಿಕೆಯನ್ನಾದರೂ ಹಾಕಿಸಿಕೊಳ್ಳುವುದು ಒಳ್ಳೆಯದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ಗೃಹಪ್ರವೇಶ

ಮಹಾರಾಷ್ಟ್ರದ ಅಹಮದ್‌ನಗರದಲ್ಲಿ ನಿವಾಸಿಯಾಗಿರುವ ಶ್ರೀಮತಿ ಯಶೋದ ಮತ್ತು ಶ್ರೀ ಕೆ. ದಿವಾಕರ ರಾವ್ ಇವರು ನೂತನವಾಗಿ ನಿರ್ಮಿಸಿರುವ ತಮ್ಮ ಗೃಹ ''ಶ್ರೀಶಾರದಾ'' ಇದರ ಪ್ರವೇಶೋತ್ಸವವನ್ನು ತಾ.24-02-2012ರಂದು ವಿಜೃಂಭಣೆಯಿಂದ ನೆರವೇರಿಸಿದರು. ಶ್ರೀ ಕೆ. ದಿವಾಕರ ರಾವ್ ಇವರು ಅಹಮದ್ ನಗರದಲ್ಲಿ ''ಶ್ರೀ ಇಂಜಿನಿಯರಿಂಗ್ ವರ್ಕ್ಸ್'' ಎಂಬ ಕಂಪೆನಿಯ ಸ್ವಂತ ಉದ್ದಿಮೆದಾರರಾಗಿದ್ದು, ಕಾಪು ದಿ| ಶ್ರೀ ಸುಬ್ಬಣ್ಣಯ್ಯ ಮತ್ತು ದಿ| ಶ್ರೀಮತಿ ಶಾರದಮ್ಮ ಇವರ ಸುಪುತ್ರರು.

★★★ ★★★

ದಿ| ಸಾಂತೂರು ಕೃಷ್ಣರಾವ್ ಇವರ ಮಗ ಪ್ರೊ| ಸುಬ್ರಹ್ಮಣ್ಯ ರಾವ್ ಮತ್ತು ಸೊಸೆ ಶ್ರೀಮತಿ ವೇದವಲ್ಲಿ ಇವರು ಉಡುಪಿ ವಿ.ಎಂ.ನಗರ, 10ನೇ ಮುಖ್ಯರಸ್ತೆಯ ಸಮೀಪ ಹೊಸದಾಗಿ ನಿರ್ಮಿಸಿರುವ ಗೃಹ 'ಸ್ಪರ್ಶ' ಇದರ ಪ್ರವೇಶೋತ್ಸವವನ್ನು ತಾ.26-02-2012ರಂದು ನೆರವೇರಿಸಿದರು.

## ನಿಧನ

### ಪಾದೆಬೆಟ್ಟು ಶ್ರೀಮತಿ ಭಾಗೀರಥಿ ಅಮ್ಮ

ಪಾದೆಬೆಟ್ಟು ಶ್ರೀ ಸೋಮಶೇಖರ ರಾವ್ ಇವರ ಮಾತೃಶ್ರೀಯವರಾದ ಶ್ರೀಮತಿ ಭಾಗೀರಥಿ ಅಮ್ಮ (94) ಇವರು ತಾ.24-02-2012ರಂದು ದೈವಾಧೀನರಾದರು. ಇವರು ನಾಲ್ವರು ಪುತ್ರರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

★★★ ★★★

### ಶ್ರೀಮತಿ ಮಹಾಲಕ್ಷ್ಮೀ ಹೆಬ್ಬಾರ್

ಉಡುಪಿ ಕರಂಬಳ್ಳಿಯಲ್ಲಿದ್ದ ದಿ| ಆರೂರು ಸುಬ್ರಾಯ ಹೆಬ್ಬಾರರ ಪತ್ನಿ ಶ್ರೀಮತಿ ಮಹಾಲಕ್ಷ್ಮೀ ಹೆಬ್ಬಾರ್‌ರವರು ವೃದ್ಧಾಪ್ಯದ ದೆಸೆಯಿಂದ ಅಸೌಖ್ಯದಿಂದಿದ್ದು ತಾ.05-02-2012ರಂದು ನಿಧನರಾದರು. ಮೃತಕಾಲಕ್ಕೆ ಇವರಿಗೆ ಸುಮಾರು 84 ವರ್ಷ ಪ್ರಾಯವಾಗಿದ್ದು ಓರ್ವ ಪುತ್ರಿ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

## ಉಪನಯನ

### ಚಿ| ಶ್ರೀವರ್ಧನ

ನಾರಾವಿ ಶ್ರೀಮತಿ ಪೂರ್ಣಿಮ ಮತ್ತು ಶ್ರೀ ರವಿಶಂಕರ ಇವರ ಪುತ್ರ ಶ್ರೀವರ್ಧನನ ಬ್ರಹ್ಮೋಪದೇಶವು ತಾ.05-03-2012ರಂದು ನಾರಾವಿ ಶ್ರೀ ಸೂರ್ಯನಾರಾಯಣ ದೇವಸ್ಥಾನದ ಬಳಿ ಇರುವ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

### ಚಿ| ಅನೀಶ್

ಸುಳ್ಯ ಕೆಳಗಿನ ನಾವೂರು ರಾಜಾರಾಮ ಜೋಯಿಸರ ಪುತ್ರ ಶ್ರೀ ಕೃಷ್ಣರಾವ್ ಮತ್ತು ಶ್ರೀಮತಿ ಆಶಾ ಇವರ ಪುತ್ರ ಅನೀಶ್‌ನ ಬ್ರಹ್ಮೋಪದೇಶವು ತಾ.27-02-2012ರಂದು ಸುಳ್ಯದ ಕೆಳಗಿನ ನಾವೂರು ಮನೆಯಲ್ಲಿ ನೆರವೇರಿತು.

★★★★

### ಚಿ| ಅನಂತಕುಮಾರ್

ಮಲ್ಲಮಾರ್ ಶ್ರೀ ಎಸ್.ಭವಾನಿಶಂಕರ ರಾಯರ ಪೌತ್ರ (ಶ್ರೀಮತಿ ಮತ್ತು ಶ್ರೀ ಜಯಶೀಲ ರಾವ್‌ರವರ ಪುತ್ರ) ಅನಂತಕುಮಾರ್‌ನ ಬ್ರಹ್ಮೋಪದೇಶವು ತಾ.02-02-2012ರಂದು ಅವರ ಮಲ್ಲಮಾರು ಸ್ವಗೃಹ ದುರ್ಗಾಕೃಪಾದಲ್ಲಿ ನೆರವೇರಿತು.

★★★★

### ಚಿ| ರಾಹುಲ್‌ಕೃಷ್ಣ

ಕರ್ವಾಲು ಶ್ರೀ ರಮೇಶ್‌ರಾವ್ ಸಿ.ಎ. ಮತ್ತು ಶ್ರೀಮತಿ ಶೈಲಜಾರವರ ಪುತ್ರ ಚಿ| ರಾಹುಲ್ ಕೃಷ್ಣನ ಬ್ರಹ್ಮೋಪದೇಶವು ತಾ.06-02-2012ರಂದು ಕರ್ವಾಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನೆರವೇರಿತು.

## ಸೀಮಂತೋನ್ನಯನ

ಶ್ರೀಮತಿ ನಾಗವಲ್ಲಿ ಮತ್ತು ಶ್ರೀ ಕೊಕ್ರಾಡಿ ಸುರೇಶ್ ರಾವ್ ಕುತ್ಪಾಡಿ ಇವರ ಸೊಸೆ (ಶ್ರೀ ಚೈತನ್ಯ ರಾವ್ ಕೊಕ್ರಾಡಿ ಇವರ ಧರ್ಮಪತ್ನಿ ಹಾಗೂ ಎಲ್ಲೂರು ಶ್ರೀ ಪ್ರಭಾಕರ ರಾವ್, ಗೀತಾ ಇವರ ಮಗಳು) ಶ್ರೀಮತಿ ರಮ್ಯಾ ಇವರ ಸೀಮಂತೋನ್ನಯನವು ತಾ.02-03-2012ರಂದು ಉದ್ಯಾವರ ಪಾದೆ ಮೇಲಿನ ಶ್ರೀ ಶಂಭುಶೈಲೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿತು.




ಎಮ್. ದೇವಾನಂದ್ ಭಟ್ Cell : 9845644556 9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add: A-206, Phoenix House, Phoenix Mills Compound, Senapati Bapat Marg, Lower Parel, Mumbai- 400013. Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INB010606122 NSE: INS231068924)


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: ''ಸತ್ಸಂಗದವರಿಂದ ಭಜನೆ'' ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.09-04-2012) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.27-03-2012 ಚೈತ್ರ ಶುದ್ಧ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.15-03-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಪಾವಂಜೆ

**ಅಂಚೆ : ಹಳೆಯಂಗಡಿ-574 146, ಮಂಗಳೂರು ತಾಲೂಕು, ದ.ಕ.ಜಿಲ್ಲೆ. ದೂರವಾಣಿ : 0824-2283393**

ಆತ್ಮೀಯರೇ, ಪಾವಂಜೆ, 14-2-2012

ಸ್ವಸ್ತಿ| ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ ಸಮಸ್ತ ಬಿರುದಾವಲೀ ವಿರಾಜಮಾನರಾದ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ **ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ** ಶ್ರೀ ನಂದನ ನಾಮ ಸಂವತ್ಸರದ ಚೈತ್ರ ಬಹುಳ ಸಪ್ತಮಿಯಿಂದ ಚೈತ್ರ ಬಹುಳ ತ್ರಯೋದಶಿಯ ವರೆಗೆ ದಿನಾಂಕ 12-4-2012ನೇ ಗುರುವಾರದಿಂದ ದಿನಾಂಕ 18-04-2012ನೇ ಬುಧವಾರದವರೆಗೆ

**ಶ್ರೀ ಕ್ಷೇತ್ರದಲ್ಲಿ ವಾರ್ಷಿಕ ಮಹೋತ್ಸವ** ಹಾಗೂ ದಿನಾಂಕ 17-04-2012

**ಮಹಾ ರಥೋತ್ಸವವು** ನೆರವೇರಲಿದೆ.

ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀಮುಡಿ ಗಂಧ-ಪ್ರಸಾದಾದಿಗಳನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಡಾ| ಯಾಜಿ ಎಚ್.ನಿರಂಜನ ಭಟ್ಟ** — ಧರ್ಮದರ್ಶಿಗಳು
**ಎಂ.ಶಶೀಂದ್ರ ಕುಮಾರ** — ಆಡಳಿತ ಮೊಕ್ತೇಸರರು

**ಏರ್ಮಾಳು ರಾಮಚಂದ್ರ ರಾವ್, ಎಸ್.ಸದಾನಂದ ರಾವ್**
**ಸ್ಕಂದ ಸ್ವಾಮಿ ಮುಕ್ಕ**
ಮೊಕ್ತೇಸರರು

**ಶ್ರೀ ದೇವಸ್ಥಾನದ ಉತ್ಸವಾದಿ ಕಾರ್ಯಕ್ರಮಗಳಿಗೆ, ನಿತ್ಯ ಅನ್ನದಾನಕ್ಕೆ, ಗೋಶಾಲೆಗೆ ಭಕ್ತಾದಿಗಳು ತನು ಮನ ಧನ ಸಹಾಯವನ್ನು ಮುಕ್ತ ಮನಸ್ಸಿನಿಂದ ನೀಡಬೇಕಾಗಿ ವಿನಂತಿ.**

## ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ

ದಿನಾಂಕ 28-03-2012ನೇ ಬುಧವಾರ

**ಕುಲಗುರುಗಳೂ, ಜಗದ್ಗುರುಗಳೂ ಆಗಿರುವ ಶ್ರೀ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ**

### ವರ್ಧಂತ್ಯುತ್ಸವವನ್ನು

ವಿದ್ವತ್ಸನ್ಮಾನದೊಂದಿಗೆ ವಿಜೃಂಭಣೆಯಿಂದ ಆಚರಿಸಲಾಗುವುದು.

ಪೂರ್ವಾಹ್ನ ಶ್ರೀ ಶ್ರೀ ಜಗದ್ಗುರು ಶ್ರೀ ಶಂಕರ ಭಗವತ್ಪಾದರ ಸನ್ನಿಧಿಯಲ್ಲಿ ವಿಶೇಷ ಪೂಜೆ. ಸಂಜೆ ಗಂಟೆ 7-30ಕ್ಕೆ ವಿದ್ವತ್ ಸನ್ಮಾನ : ಶ್ರೀ ಎಚ್.ಎನ್.ವೆಂಕಟೇಶ ಪ್ರಸನ್ನ, ಪೋಲಿಸ್ ಇನ್ಸ್‌ಪೆಕ್ಟರ್, ಸಿ.ಸಿ.ಬಿ. ಮಂಗಳೂರು

ಈ ಕಾರ್ಯಕ್ರಮಗಳಿಗೆ ಆಗಮಿಸಿ, ಶ್ರೀ ಶ್ರೀ ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

Modern apartments...
with Style and Comforts

Book Now
Only Few flats
Available



vishwa prabha
Volakadu, Udupi

Located at Volakad, a quiet neighbourhood, a few meters away from the abode of Lord Krishna, the famous Sri Krishna Temple of Udupi, Vishwa Prabha is an ideal block of apartments for setting up home for the people who are closely connected with the culture of Udupi.

Amenities
- Spacious deluxe entrance lobby.
- Air conditioned Recreation Club.
- Door Phone for main door
- 6 passenger ultra modern Hi-speed elevator
- 24 hr power backup by diesel generator.
- Ample covered car parking facilities in stilt floor at extra cost.
- Reticulated cooking gas system.




Lakshmi Vallabh
Vibhudapriya Nagar, Manipal

Located at Vibhudapriaya Nagar, Udupi, a quiet neighbourhood, a few meters away from Manipal …the truly international educational hub and a destination for total health care, is located on the pristine coastal region of Karnataka state, in India. It beckons academicians, students alike in the pursuit of quality education, in true international standards.



Bharath Developers, an upcoming, enterprising construction company, is truly rooted to the philosophy of service with dedication to the people of Udupi. Having completed two projects - PRATHEEK Apartments and SHUBHANGA Apartments at Udupi, Bharath Developers are forging ahead through their commitment to service, quality and reliability. Vishwa Prabha and Lakshmi Vallabh are ongoing projects, offering to the people of Udupi and Manipal, with many more to come in the future dates.

Design: vasanth@kedige.com

Promoter
Bharath
DEVELOPERS
Vyasaraj Building, Car Street, Udupi - 576 101
E-mail: bharathdevelopers@yahoo.co.in
Call: 0824 2522444, 98808 96166

For more information
visit our website
www.bharathdevelopers.com

Bookings Open
1 BHK, 2 BHK and 3 BHK
Apartments

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Gurushree Building, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org